WPP No. SK/MNG/WPP/69 D.O.P - 15th of every month from Udupi HPO
ಬೆಲೆ ರೂ.2.50

ದಶಮಾನೋತ್ಸವ ಸಂಭ್ರಮ

# ಶ್ರೀ ಶಾರದಾ

ಮಾಸಪತ್ರಿಕೆ – 15 ನವಂಬರ್ 2010

॥ ಧಿಯೋ ಯೋನಃ ಪ್ರಚೋದಯಾತ್ ॥

**ಹೆಬ್ಬಾರ್ ಎಂಟರ್‌ಪ್ರೈಸಸ್**

ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ – 576 101.

ಶುಭ ಸಮಾರಂಭಗಳಿಗೆ ಬೇಕಾಗುವ ಕ್ಯಾಟರಿಂಗ್ ವ್ಯವಸ್ಥೆ, ಶಾಮಿಯಾನ, ಗ್ಯಾಸ್ ಸ್ಟವ್, ಟೇಬಲ್, ಕುರ್ಚಿ, ಪಾತ್ರೆಗಳು ಹಾಗೂ ಇನ್ನಿತರ ಎಲ್ಲಾ ವ್ಯವಸ್ಥೆಗಳನ್ನೂ ಸಕಾಲದಲ್ಲಿ ಒದಗಿಸಲಾಗುವುದು.


ಫೋನ್ : 2531493 (O), 2530851 (R), ಮೊಬೈಲ್ : 94484 37893

Regn.No.KAR/KAN/2000/2758 ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.) ಶ್ರೀ ಶಾರದಾ ಮಂಟಪ, ಶಾರದಾನಗರ, ಕುಂಜಿಬೆಟ್ಟು, ಉಡುಪಿ – 576 102. ☎ 2520754

ಸಂಪುಟ-10 ಸಂಚಿಕೆ-11 ಪುಟಗಳು-8 Registered Under No.J/UDP/1260/2009-2011 Dated from 01-12-2008 to 30-11-2011

**ಪಂಚೇಂದ್ರಿಯಂಗಳೊಳ್ ನಾಲ್ಕಥಮ ಒಂದಧಿಕವೆ?**
- ಬೈಲಕೆರೆ ನಾರಾಯಣ
ಪುಟ-5

ಶ್ರೀ ಕೃಷ್ಣಾಯನ
- ಕೆ. ಆತ್ಮಾರಾಮ ಶಾಸ್ತ್ರೀ, ಬೆಂಗಳೂರು
ಪುಟ-2



**ಹನಿಗವನಗಳು**
ಮಾರ್ಪಳ್ಳಿ ಆರ್. ಮಂಜುನಾಥ್ ಶಿವಮೊಗ್ಗ
ಗೋ.ರಾ.ಕೆ. ಕಡಬ ; ಎಂ. ಗಣೇಶ್ ರಾವ್ ಬಾರಕೂರು
ವೈ.ಎ.ರಾವ್
ಪುಟ-6

**6ನೇ ಅಕ್ಕ ವಿಶ್ವ ಕನ್ನಡ ಸಮ್ಮೇಳನ-2010**
ಪುಟ-3



# ಶ್ರೀಶಾರದಾ ಮಂಟಪದಲ್ಲಿ ವಿಜಯದಶಮಿಯಂದು ಚಂಡಿಕಾಹೋಮ-ಯಕ್ಷಗಾನ









ನವರಾತ್ರಿ ಕಳೆದು ಬರುವ ವಿಜಯದಶಮಿಯಂದು ಚಂಡಿಕಾಹೋಮವನ್ನು ನಡೆಸಿಕೊಂಡು ಬರುವ ಉದ್ದೇಶದಿಂದ ಸ್ಥಾಪನೆಯಾಗಿರುವ ನಮ್ಮ ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ ಸ್ಥಾಪನೆಯಾದಂದಿನಿಂದ ನಿರಂತರವಾಗಿ ಚಂಡಿಕಾಹೋಮವನ್ನು ವಿಧಿವತ್ತಾಗಿ ಆಚರಿಸಿಕೊಂಡು ಬರುತ್ತಿದೆ.

ಪ್ರತಿವರ್ಷದಂತೆ ಈ ವರ್ಷವೂ ಶ್ರೀ ಶಾರದಾ ದೇವಸ್ಥಾನದಲ್ಲಿ ನವರಾತ್ರಿ ಉತ್ಸವವು ತಾ.08-10-2010ರಿಂದ 17-10-2010ರ ವರೆಗೆ ಪ್ರತಿದಿನ ಮಧ್ಯಾಹ್ನ ಹಾಗೂ ರಾತ್ರಿಯ ವಿಶೇಷ ಪೂಜೆ ಹಾಗೂ ಧಾರ್ಮಿಕ ವಿಧಿಗಳೊಂದಿಗೆ ನಡೆಯಿತು. ನವರಾತ್ರಿಯ ಪ್ರತಿದಿನವೂ ದೇವಸ್ಥಾನ ವೇದಿಕೆ ಮತ್ತು ಮಹಿಳಾ ವೇದಿಕೆಯ ಸದಸ್ಯರು, ಸಾರ್ವಜನಿಕರು ಹಾಗೂ ಸಮಾಜ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ, ದೇವಿಯ ಪೂಜೆಯಲ್ಲಿ ಭಾಗವಹಿಸಿದರು. ಸಂಜೆ 5-30ರಿಂದ ರಾತ್ರಿ 7-00 ಗಂಟೆಯ ವರೆಗೆ ಶ್ರೀದೇವಿಯ ಸ್ತೋತ್ರ, ಭಕ್ತಿಗೀತೆಗಳನ್ನು ಮಹಿಳಾವೇದಿಕೆಯ ಸದಸ್ಯರು ಪಠಿಸುತ್ತಿದ್ದು ಉತ್ಸವದ ವಾತಾವರಣ ಉಂಟಾಗಿ ಶಾರದಾ ಮಂಟಪದ ಪರಿಸರವು ಕಂಗೊಳಿಸುತ್ತಿತ್ತು. ತಾ.17-10-2010ನೇ ಆದಿತ್ಯವಾರ ವಿಜಯದಶಮಿಯಂದು ಮುಂಜಾನೆ 7ಗಂಟೆಗೆ ಸರಿಯಾಗಿ ವೇ। ಮೂ। ಪಾವಂಜೆ ವಾಸುದೇವ ಉಪಾಧ್ಯಾಯರ ನೇತೃತ್ವದಲ್ಲಿ ಶ್ರೀ ಶಾರದಾ ದೇವಸ್ಥಾನದಲ್ಲಿ ಪ್ರಾರ್ಥನೆ ಮೂಲಕ ಚಂಡಿಕಾಯಾಗವು ಪ್ರಾರಂಭಗೊಂಡಿತು. ಸಂಘದ ಅಧ್ಯಕ್ಷರು, ಕಾರ್ಯದರ್ಶಿ, ಖಜಾಂಚಿ ಹಾಗೂ ಇತರ ಪದಾಧಿಕಾರಿಗಳು, ನಿರ್ದೇಶಕರು ಉಪಸ್ಥಿತರಿದ್ದರು.

ಚಂಡಿಕಾಯಾಗದ ಧಾರ್ಮಿಕ ಕ್ರಿಯೆಯು ವೇ। ಮೂ। ವಾಸುದೇವ ಉಪಾಧ್ಯಾಯರ ನೇತೃತ್ವದಲ್ಲಿ ಋತ್ವಿಜರೊಡನೆ ಯಾಗ ಕರ್ತೃಗಳಾದ ಸಂಘದ ನಿರ್ದೇಶಕರು ಶ್ರೀ ಬಿ. ಜಯರಾಮರಾವ್ ಮತ್ತು ಶ್ರೀಮತಿ ವೀಣಾ ದಂಪತಿಗಳಿಂದ ನಡೆಯಿತು. ಮಹಿಳಾ ವೇದಿಕೆಯ ಸದಸ್ಯರು ಹಾಗೂ ಪರಿಸರದ ವನಿತೆಯರು ಲಲಿತಾ ಸಹಸ್ರನಾಮ ಪಠಣ ನಡೆಸಿದರು. ಪೂರ್ವಾಹ್ನ 7-30ರ ಸುಮಾರಿಗೆ ಪ್ರಾರಂಭಗೊಂಡ ಚಂಡಿಕಾಯಾಗವು ಮಧ್ಯಾಹ್ನ 12 ಗಂಟೆಗೆ ಪೂರ್ಣಾಹುತಿಯೊಂದಿಗೆ ಸಂಪನ್ನಗೊಂಡಿತು.

**ಸಾಂಸ್ಕೃತಿಕ ಸ್ಪರ್ಧೆಗಳು :**

ವಿಜಯದಶಮಿಯಂದು ಈ ಹಿಂದೆ ನಡೆದುಕೊಂಡು ಬಂದಂತೆ ಈ ವರ್ಷವೂ ನಮ್ಮ ಸಮಾಜದ ಎಲ್ಲಾ ವರ್ಗದ ಜನರಿಗೆ ವಿವಿಧ ಸ್ಪರ್ಧೆಗಳನ್ನು ಏರ್ಪಡಿಸಲಾಯಿತು. ವಿದ್ಯಾರ್ಥಿಗಳಿಗೆ ರಂಗೋಲಿ, ಭಕ್ತಿಗೀತೆ, ಚಿತ್ರ ರಚನೆ, ಕಂಠಪಾಠ ಸ್ಪರ್ಧೆ ಮತ್ತು ಛದ್ಮವೇಷ ಸ್ಪರ್ಧೆಗಳನ್ನು, ಮಹಿಳೆಯರಿಗೆ ಹೂ ಜೋಡಿಸುವ ಸ್ಪರ್ಧೆಯನ್ನು, ಚೂರ್ಣಿಕೆ ಹೇಳುವ ಸ್ಪರ್ಧೆಯನ್ನು ನಡೆಸಲಾಯಿತು. ಯುವ ವೇದಿಕೆ ಮತ್ತು ಮಹಿಳಾ ವೇದಿಕೆಯ ಸದಸ್ಯರು ವಿವಿಧ ಸ್ಪರ್ಧೆಗಳನ್ನು ಯಶಸ್ವಿಯಾಗಿ ಸಂಯೋಜಿಸಿದ್ದರು.

ಯುವ ವೇದಿಕೆಯ ಟಿ.ಜಗದೀಶ ರಾವ್ ಇವರು ಪ್ರತಿವರ್ಷದಂತೆ ಈ ಬಾರಿಯೂ ರಂಗವಲ್ಲಿ ಹುಡಿಯನ್ನು ನೀಡಿದ್ದು ಕೆಲವು ಸ್ಪರ್ಧೆಗಳ ಬಹುಮಾನದ ಪ್ರಾಯೋಜಕರಾಗಿ ಪ್ರೋತ್ಸಾಹಿಸಿದರು.

ಇದೇ ಸಂದರ್ಭದಲ್ಲಿ ಮಹಿಳಾ ವೇದಿಕೆಯುವರು ಶ್ರೀಶಾರದಾ ಮಾತೆಗೆ ಅಲಂಕರಿಸಿದ್ದ ಸೀರೆಗಳನ್ನು ಮಾರಾಟ ಮಾಡಿದರು.

**ಉಚಿತ ವೈದ್ಯಕೀಯ ತಪಾಸಣಾ ಶಿಬಿರ**

ಕಳೆದ ವರ್ಷದಂತೆಯೇ ಈ ವರ್ಷವೂ ಡಾ। ಜಿ.ಎಸ್. ಚಂದ್ರಶೇಖರ್‌ರವರ ಆದರ್ಶ ಆಸ್ಪತ್ರೆ ಮತ್ತು ಎಲ್ಲೂರು ಲಕ್ಷ್ಮೀನಾರಾಯಣ ರಾವ್ ಜ್ಯೋತಿಷ್ಕ ಮೆಮೋರಿಯಲ್ ಟ್ರಸ್ಟ್ ವತಿಯಿಂದ ಉಚಿತ ರಕ್ತದೊತ್ತಡ ಡಯಾಬಿಟಿಸ್, ಇಸಿಜಿ ಮತ್ತು ಕೊಲೆಸ್ಟರಾಲ್ ತಪಾಸಣಾ ಶಿಬಿರ ನಡೆಯಿತು. ಈ ಕಾರ್ಯಕ್ರಮದ ನೇತೃತ್ವವನ್ನು ಸಂಘದ ಖಜಾಂಚಿ ಡಾ। ವೈ.ಎಸ್.ರಾವ್ ವಹಿಸಿದ್ದರು.

(3ನೇ ಪುಟಕ್ಕೆ....)



## ಶ್ರೀ ಶಾರದಾ ದೇವಸ್ಥಾನ

ಕುಂಜಿಬೆಟ್ಟು, ಶಾರದಾ ನಗರ, ಉಡುಪಿ-576 102

ಶ್ರೀಶಾರದಾ ದೇವಸ್ಥಾನದಲ್ಲಿ ಸಮಾಜ ಬಾಂಧವರ ಹಾಗೂ ಪರಿಸರದ ಭಕ್ತಾಭಿಮಾನಿಗಳ ಅಪೇಕ್ಷೆಯಂತೆ ತಾ.19-12-2010ನೇ ಆದಿತ್ಯವಾರ

**ಸಾಮೂಹಿಕ ಚಂಡಿಕಾಯಾಗವು**

ನಡೆಯಲಿರುವುದು.

**ಈ ಧಾರ್ಮಿಕ ಕಾರ್ಯಕ್ರಮದಲ್ಲಿ ಭಕ್ತ ಬಾಂಧವರೆಲ್ಲರೂ ಪಾಲ್ಗೊಂಡು ಶ್ರೀ ದುರ್ಗಾಮಾತೆಯ ಕೃಪೆಗೆ ಪಾತ್ರರಾಗಬೇಕಾಗಿ ವಿನಂತಿ.**

- ಚಂಡಿಕಾಯಾಗದ ಕರ್ತೃಗಳಾಗಲಿಚ್ಛಿಸುವವರು ದೇವಸ್ಥಾನದ ಅರ್ಚಕರ ಅಥವಾ ಶ್ರೀಶಾರದಾ ಮಂಟಪದ ಮ್ಯಾನೇಜರವರಲ್ಲಿ ರೂ.300/-ನ್ನು ನೀಡಿ ರಶೀದಿ ಪಡೆದುಕೊಳ್ಳಬೇಕಾಗಿ ವಿನಂತಿ.
- ಯಾಗಕ್ಕೆ ತುಪ್ಪ, ತೆಂಗಿನಕಾಯಿ, ಬಾಳೆಹಣ್ಣು, ವೀಳ್ಯದೆಲೆ, ಅಡಿಕೆ, ಗಂಧ, **ಹತ್ತಿ ನೂಲಿನ ಅಥವಾ ರೇಷ್ಮೆಯ** ರವಿಕೆ ಕಣ, ಸೀರೆ, ಯಾಗ ದ್ರವ್ಯಗಳು, ಸಮಿತ್ತು, ಪುಷ್ಪ, ತುಳಸಿ ತಂದಲ್ಲಿ ಯಾಗ ದೇವತೆಗೆ ಅರ್ಪಿಸುವ ಅವಕಾಶವಿದೆ.
- ಸೇವಾ ಕರ್ತೃಗಳು ಬೆಳಿಗ್ಗೆ ಗಂಟೆ 8-00ಕ್ಕೆ ಯಾಗ ಸಂಕಲ್ಪಕ್ಕಾಗಿ ಉಪಸ್ಥಿತರಿರಬೇಕಾಗಿ ವಿನಂತಿ. ಗಂಟೆ 12-00ಕ್ಕೆ ಯಾಗದ ಪೂರ್ಣಾಹುತಿ ನಡೆಯಲಿದೆ.

ವಿ.ಸೂ. : ಕರ್ತೃಗಳಿಗೆ ಪ್ರತ್ಯೇಕವಾಗಿ ಯಾಗ ಪ್ರಸಾದ ನೀಡುವ ವ್ಯವಸ್ಥೆ ಇದೆ. (ರಶೀದಿ ತೋರಿಸಿ ಪಡೆದುಕೊಳ್ಳಬಹುದು) ಉಪಸ್ಥಿತಿ ಸಾಧ್ಯವಿಲ್ಲದ ಕರ್ತೃಗಳು ಮರುದಿನ ರಶೀದಿ ತೋರಿಸಿ ಶಾರದಾ ಮಂಟಪದ ಮ್ಯಾನೇಜರರಿಂದ ಪ್ರಸಾದ ಪಡೆದುಕೊಳ್ಳಬಹುದು.

**- ವ್ಯವಸ್ಥಾಪಕರು.**

**ಸಂಪಾದಕ ಮಂಡಳಿ**

ವೈ. ಮೋಹನ ರಾವ್
ಎಚ್.ಎನ್. ಶ್ಯಾನುಭಾಗ್
ಪ್ರಕಾಶ್ ರಾವ್ ಕೋಲ್ಪೆ
ಟಿ. ಸುರೇಶ ರಾವ್ ಅಂಬಾಗಿಲು

ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿ ಅಭಿವ್ಯಕ್ತವಾಗುವ ಅಭಿಪ್ರಾಯಗಳು, ಅನಿಸಿಕೆಗಳು ಲೇಖಕರ ಸ್ವಂತ ಅಭಿಪ್ರಾಯಗಳೇ ಹೊರತು ಅವು ಪತ್ರಿಕೆಯ ಸಂಪಾದಕರ ಅಥವಾ ಪ್ರಕಾಶಕರ ಅಭಿಪ್ರಾಯವಾಗಿರಬೇಕಾಗಿಲ್ಲ.

ಪತ್ರಿಕೆಯಲ್ಲಿ ಪ್ರಕಟವಾದ ಲೇಖನಗಳು ಅಥವಾ ಇತರ ಯಾವುದೇ ವಿಷಯಗಳ ಬಗ್ಗೆ ಅನಿಸಿಕೆಗಳನ್ನು ವಾಚಕರು ನಿಸ್ಸಂಕೋಚವಾಗಿ ಪತ್ರ ಮುಖೇನ ಸಂಪಾದಕ ಮಂಡಳಿಗೆ ತಿಳಿಸಬಹುದು.

-ಸಂ.

## ಚಿಂತನ

ಎನ್‌ಕೌಂಟರ್ ನಿಪುಣ ಶ್ರೀ ದಯಾ ನಾಯಕ್ ತಮ್ಮ ಅನುಭವವನ್ನು ತಮ್ಮ ಪುಸ್ತಕದಲ್ಲಿ ಹೀಗೆ ಬರೆದಿದ್ದಾರೆ:-

ನನ್ನ ಹೈಸ್ಕೂಲು ಸಹಪಾಠಿಯೊಬ್ಬ ನನ್ನ ಜೊತೆ ಓದುವಾಗ ನನಗೆ ಪ್ರತಿಯೊಂದು ವಿಚಾರದಲ್ಲಿಯೂ ಸವಾಲೊಡ್ಡುತ್ತಿದ್ದ. ಹೈಸ್ಕೂಲಿನಿಂದ ಕಾಲೇಜಿನವರೆಗೂ ನನ್ನ ಜೊತೆಯಲ್ಲಿದ್ದು ನಾಯಕತ್ವಕ್ಕಾಗಿ ಇಬ್ಬರಿಗೂ ಆಗಾಗ ಸಣ್ಣಪುಟ್ಟ ಜಗಳದಂತಹ ಘಟನೆಗಳು ನಡೆಯುತ್ತಲೇ ಇತ್ತು. ಮುಂದೆ ನಾನು ಉದ್ಯೋಗಿಯಾಗಿ ಮುಂಬೈ ಪೋಲಿಸ್ ಇಲಾಖೆಗೆ ಸೇರಿದೆ. ನನ್ನ ಉದ್ಯೋಗದಲ್ಲಿ ನಾನು ಮಾಡಿದ ಸಾಧನೆಯಿಂದ ನಾನು ಭಡ್ತಿಪಡೆಯುತ್ತಲೇ ಹೋಗಿದ್ದೆ.


ಒಂದು ದಿನ ಒಂದು ಹಳೆ ಕಟ್ಟಡದಲ್ಲಿ ದುಷ್ಕರ್ಮಿಗಳು ಅಡಗಿದ್ದು, ಅವರನ್ನು ಹಿಡಿದು ತರುವ ಉದ್ದೇಶದಿಂದ ನಾವು ತಂಡ ರಚಿಸಿ ಅಲ್ಲಿಗೆ ನಡೆದೆವು. ದುಷ್ಕರ್ಮಿಗಳನ್ನು ಜೀವಂತವಾಗಿ ಸೆರೆಹಿಡಿಯಲಾಗದಿದ್ದರೂ ಎನ್‌ಕೌಂಟರ್ ಮೂಲಕ ಅವರಲ್ಲಿ ಎಂಟು ಜನರನ್ನು ಮುಗಿಸಿದೆವು. ಅವರ ಗ್ಯಾಂಗ್‌ನ ನಾಯಕ ಯಾರೆಂದು ಅವನ ಫೈಲ್ ತಿರುಗಿಸಿ ನೋಡಿದರೆ ನನಗೇ ಆಶ್ಚರ್ಯ-ನನ್ನ ವಿದ್ಯಾಭ್ಯಾಸದಲ್ಲಿ ಯಾರಾತ ನನಗೆ ಸವಾಲೊಡ್ಡುತ್ತಿದ್ದನೋ, ಪ್ರತಿಭಾವಂತನಾದ ಆತನೇ ತಿರುಪತಿ ಎಂದು ನನಗೆ ತಿಳಿಯಿತು. ಆತನನ್ನೇ ನಾನು ಕೊಲೆ ಮಾಡಬೇಕಾಯಿತು.

ಇದೇ ತಿರುಪತಿ ಈಗಾಗಲೇ 18 ಕೊಲೆಗಳನ್ನು ಮಾಡಿ ಪೋಲೀಸು ಇಲಾಖೆಗೆ ಬೇಕಾದ ವ್ಯಕ್ತಿಯಾಗಿದ್ದ. ನಾನು ಕೂಡಾ ನನ್ನ ಉದ್ಯೋಗವತಿಯಿಂದ ಕೊಲೆಗಾರನಾಗಿದ್ದೆ. ನಾನೂ ಅದಾಗಲೇ ಎನ್‌ಕೌಂಟರ್ ಮೂಲಕ 13 ಕೊಲೆ ಮಾಡಿದ್ದೆ. ಆದರೆ ನಾನು ಮಾಡಿದ ಕೊಲೆ ಸಾಮಾಜಿಕವಾಗಿ ಉಪಯುಕ್ತವಾಗಿರುವಂತಹದು. ನನ್ನ ಸಹಪಾಠಿ ಮಾಡಿದ ಕೊಲೆ ಸಮಾಜಕಂಠಕವಾದುದು.

ಇಲ್ಲಿ ನಾವು ತಿಳಿದುಕೊಳ್ಳಬೇಕಾದುದು ಬಹಳಷ್ಟು ಇದೆ. ನಮ್ಮ ಯುವಕರು ಎಂಥ ನಾಯಕರಾಗಬೇಕು. ತಿರುಪತಿಯಂತಹ ಸಮಾಜ ಕಂಠಕ ನಾಯಕರೇ ಅಥವಾ ದಯಾನಾಯಕ್‌ರಂತಹ ಸಮಾಜಕ್ಕೆ ಉಪಯುಕ್ತವಾಗುವ ನಾಯಕರೇ? ನಮ್ಮ ಯುವಕರಿಗೆ ಯುವಾವಸ್ಥೆಯಲ್ಲಿಯೇ ಸರಿಯಾದ ಮಾರ್ಗದರ್ಶನ-ತರಬೇತಿ ಮೊದಲಾದವುಗಳು ಸಿಕ್ಕಿದರೆ ದಯಾನಾಯಕ್‌ರಂತಹ ನಾಯಕರಾಗಬಹುದು. ಇಲ್ಲದಿದ್ದರೆ ದಾರಿತಪ್ಪಿ ತಿರುಪತಿಯಂತೆ ಸಮಾಜ ಕಂಠಕರಾಗಬಹುದು ಎಂದು ತಿಳಿಯೋಣವೇ?

# ಶ್ರೀ ಕೃಷ್ಣಾಯನ

## (ಶ್ರೀ ಮದ್ಭಾಗವತಾನುಸಾರಿ)



- ಕೆ. ಆತ್ಮಾರಾಮ ಶಾಸ್ತ್ರೀ
ಬೆಂಗಳೂರು

(ಹಿಂದಿನ ಸಂಚಿಕೆಯಿಂದ...)

### ೮

ಇತ್ತ ಕಂಸನು ಅನುಚರರಿಂದ ಕೃಷ್ಣನು ಬಿಲ್ಲನ್ನು ಮುರಿದ, ರಾಮ,ಕೃಷ್ಣರು ರಕ್ಕಸರನ್ನು ಸದೆಬಡಿದ ವಾರ್ತೆಯನ್ನು ಕೇಳಿ ಗಾಬರಿಗೊಂಡನು. ಅವನಿಗೆ ರಾತ್ರಿಯೆಲ್ಲ ನಿದ್ದೆಯೇ ಬರಲಿಲ್ಲ. ಎಲ್ಲೆಲ್ಲೂ ಅವನಿಗೆ ಕೃಷ್ಣನೇ ಕಾಣಿಸಿದನು. ಅನೇಕ ಅಪಶಕುನಗಳೂ ಕಾಣಿಸಿಕೊಂಡವು. ಅರೆನಿದ್ದೆಯಲ್ಲೂ ಕೆಟ್ಟ ಕನಸುಗಳು ಬಿದ್ದವು. ಅಂತು ಬೆಳಗಾಯಿತು.

ಕಂಸನು ಮಲ್ಲರಂಗಕ್ಕೆ ತೆರಳಿ ಮಲ್ಲ ಕ್ರೀಡೋತ್ಸವವನ್ನು ಉದ್ಘಾಟಿಸಿದನು. ಅವನ ಜನರು ರಂಗವನ್ನು ಪೂಜಿಸಿದರು. ವಿವಿಧ ವಾದ್ಯಗಳನ್ನು ನುಡಿಸಿದರು. ರಂಗದ ಸುತ್ತಲೂ ಊರ ಜನರು ಬಂದು ಆಸನಗಳಲ್ಲಿ ಕುಳಿತರು. ನಂದಗೋಪನೇ ಮೊದಲಾದ ಗೋಪಾಲಕರು ಕಂಸನಿಗೆ ಕಪ್ಪಕಾಣಿಕೆಗಳನ್ನು ಅರ್ಪಿಸಿ ಆಸನಗಳಲ್ಲಿ ಆಸೀನರಾದರು.

ಇತ್ತ ರಾಮ, ಕೃಷ್ಣರು ಪ್ರಾತಃ ಕೃತ್ಯಗಳನ್ನು ಮುಗಿಸಿ ಮಲ್ಲಕ್ರೀಡೆಯನ್ನು ನೋಡಲು ಬಂದರು. ಬಾಗಿಲಿಗೆ ಅಡ್ಡವಾಗಿ ಕುವಲಯಾಪೀಡ ಆನೆ ನಿಂತಿತ್ತು. ಕೃಷ್ಣನು ಮಾವಟಿಗನಿಗೆ ದಾರಿಬಿಟ್ಟು ನಿಲ್ಲುವಂತೆ ಹೇಳಿದನು. ಬಿಡದಿದ್ದರೆ ಆನೆಸಹಿತ ಅವನನ್ನು ಸಂಹರಿಸುವುದಾಗಿ ಬೆದರಿಸಿದನು. ಆಗ ಮಾವಟಿಗನ ಪಿತ್ತನೆತ್ತಿಗೇರಿತು. ಅವನು ಅಂಕುಶದಿಂದ ಆನೆಯನ್ನು ಕೆರಳಿಸಿ ಕೃಷ್ಣನ ಮೇಲೆ ನುಗ್ಗಿಸಿದನು. ಆಗ ಕೃಷ್ಣನು ಆನೆಯ ಸೊಂಡಿಲನ್ನು ಹಿಡಿದು, ಎಳೆದು ಅದನ್ನು ನೆಲಕ್ಕೆ ಕೆಡವಿದನು. ಕೂಡಲೇ ಆನೆಯ ದಂತವನ್ನು ಕಿತ್ತು ಅದರಿಂದಲೇ ಆನೆಯನ್ನೂ, ಮಾವಟಿಗನನ್ನೂ ತಿವಿದು ಕೊಂದು ಹಾಕಿದನು. ಬಲದೇವನೂ ಇನ್ನೊಂದು ದಂತವನ್ನು ಕಿತ್ತುಕೊಂಡನು. ಅವರಿಬ್ಬರು ದಂತಗಳನ್ನು ಹಿಡಿದುಕೊಂಡೇ ರಂಗವನ್ನು ಪ್ರವೇಶಿಸಿದರು. ರಕ್ತಸಿಕ್ತ ಬಟ್ಟೆಗಳಿಂದ ಅವರ ಶೋಭೆ ಮತ್ತೂ ಹೆಚ್ಚಾಗಿತ್ತು. ಮಾಧವನು ಮಲ್ಲರಿಗೆ ಸಿಡಿಲಿನಂತೆಯೂ, ಸಾಮಾನ್ಯ ಜನರಿಗೆ ಪುರುಷೋತ್ತಮನಂತೆಯೂ, ಸ್ತ್ರೀಯರಿಗೆ ಮೂರ್ತಿವೆತ್ತ ಅನಂಗನಂತೆಯೂ, ಗೋಪಾಲಕರಿಗೆ ಜ್ಞಾತಿಯಂತೆಯೂ, ದುಷ್ಟ ರಾಜರಿಗೆ ಶಾಸ್ತಿಕರನಂತೆಯೂ, ನಂದ ಮೊದಲಾದವರಿಗೆ ಮಗುವಿನಂತೆಯೂ, ಕಂಸನಿಗೆ ಯಮನಂತೆಯೂ, ಅಜ್ಞಾನಿಗಳಿಗೆ ವಿರಾಟ್ಪುರುಷನಂತೆಯೂ, ಯೋಗಿಗಳಿಗೆ ಪರತತ್ತ್ವದಂತೆಯೂ, ವೃಷ್ಣಿಗಳಿಗೆ ಪರದೇವತೆಯಂತೆಯೂ ಕಾಣಿಸಿದನು. ಕುವಲಯಾಪೀಡದ ಸಂಹಾರದಿಂದ ಕಂಸನು ಉದ್ವಿಗ್ನನಾಗಿದ್ದನು. ರಂಗದಲ್ಲಿ ಸೇರಿದ್ದ ಜನರಿಗೆ ರಾಮ, ಕೃಷ್ಣರನ್ನು ನೋಡಿ ಅತ್ಯಾನಂದವಾಯಿತು. ಅವರನ್ನು ಎಷ್ಟು ನೋಡಿದರೂ ತೃಪ್ತಿಯಾಗಲಿಲ್ಲ. ಒಬ್ಬೊಬ್ಬರು ಒಂದೊಂದು ರೀತಿಯಿಂದ ಅವರ ಲೀಲೆಗಳನ್ನು ಬಣ್ಣಿಸಿ ಹೇಳುತ್ತಿದ್ದರು. ಅಂತು ಎಲ್ಲರೂ ಸಂಭ್ರಮ, ಉತ್ಸಾಹ, ಹರ್ಷಗಳಿಂದ ತುಂಬಿ ಹೋಗಿದ್ದರು. ಅಷ್ಟರಲ್ಲಿ ರಂಗದಲ್ಲಿ ತುತ್ತೂರಿ, ಭೇರಿಗಳ ಶಬ್ದವಾಯಿತು. ಚಾಣೂರನು ರಾಮ, ಕೃಷ್ಣರನ್ನು ಸಂಬೋಧಿಸಿ ಹೀಗೆಂದನು-ನಂದಕುಮಾರ, ರಾಮ, ನೀವು ಮಹಾವೀರರೆಂದು ತಿಳಿದ ನಮ್ಮ ಕಂಸ ಮಹಾರಾಜರು ನಿಮ್ಮನ್ನು ನೋಡಲಿಚ್ಛಿಸಿ ಇಲ್ಲಿಗೆ ಬರಮಾಡಿಕೊಂಡಿರುವರು. ನೀವು ಹೇಳಿ ಕೇಳಿಗೊಲ್ಲರು. ನೀವು ಸ್ವೇಚ್ಛೆಯಾಗಿ ಆಡಿಕೊಂಡಿದ್ದವರು. ನೀವೀಗ ನನ್ನೊಡನೆಯೂ ಮಲ್ಲಕ್ರೀಡೆಯನ್ನಾಡಿರಿ. ಮಹಾರಾಜರು ಅದನ್ನು ನೋಡಿ ಸಂತೋಷಪಡಲಿ ಬನ್ನಿ.

ಆಗ ಕೃಷ್ಣನೆಂದನು-ಚಾಣೂರಪ್ಪ, ನಾವಿನ್ನೂ ಬಾಲಕರು. ದ್ವಂದ್ವಯುದ್ಧ ಯಾವಾಗಲೂ ಸಮಾನಬಲರೊಳಗೆ ನಡೆಯಬೇಕು. ಇಲ್ಲವಾದರೆ ಅನ್ಯಾಯವಾಗುತ್ತದೆ.

ಚಾಣೂರ-ಕೃಷ್ಣ, ನೀವಿಬ್ಬರೂ ಮಹಾ ಬಲಶಾಲಿಗಳು. ಈಗಾಗಲೇ ಅನೇಕ ರಾಕ್ಷಸರನ್ನು ವಧಿಸಿರುವವರು. ಆದುದರಿಂದ ನನ್ನೊಡನೆ ಮಲ್ಲಯುದ್ಧ ಮಾಡಲು ನಿಮಗೆ ಅರ್ಹತೆಯಿದೆ. ಇಲ್ಲಿ ಅನ್ಯಾಯದ ಪ್ರಶ್ನೆ ಬರುವುದಿಲ್ಲ. ನೀನು ನನ್ನೊಡನೆಯೂ, ರಾಮನು ಮುಷ್ಟಿಕನೊಡನೆಯೂ ಕಾದಾಡಬಹುದು. ಬನ್ನಿ.

ಭಗವಾನ್ ಶ್ರೀಕೃಷ್ಣನು ನಿಶ್ಚಯ ಮಾಡಿಕೊಂಡಂತೆ ಚಾಣೂರನೊಡನೆ ಮಲ್ಲಕಾಳಗವನ್ನಾರಂಭಿಸಿದನು. ಬಲರಾಮನು ಮುಷ್ಟಿಕನನ್ನು ತಾಗಿದನು. ಕೈಗಳಿಂದ ಕೈಗಳನ್ನು ಕಟ್ಟಿ, ಕಾಲುಗಳಿಂದ ಕಾಲುಗಳನ್ನು ಸುತ್ತಿ ಒಬ್ಬರನ್ನೊಬ್ಬರು ಎಳೆದಾಡಿದರು. ಕೈಯಿಂದ ಕೈಗೆ ಹೊಡೆದರು. ಹಣೆಯಿಂದ ಹಣೆಗೆ ಘಟ್ಟಿಸಿದರು. ಕಾಲಿಂದ ಕಾಲಿಗೆ ಒದೆದರು. ವಿವಿಧ ಪಟ್ಟುಗಳನ್ನು ಪ್ರಯೋಗಿಸಿದರು. ಒಬ್ಬರನ್ನೊಬ್ಬರು ಉರುಳಿಸಿದರು. ಚಕ್ಕನೆ ಎದ್ದು ಒಬ್ಬರ ಮೇಲೊಬ್ಬರು ಬಿದ್ದರು. ಹೀಗೆ ಮಲ್ಲಯುದ್ಧ ನಡೆಯುತ್ತಿದ್ದಾಗ ಜನರು, ಮುಖ್ಯವಾಗಿ ಸ್ತ್ರೀಯರು ರಾಮ, ಕೃಷ್ಣರ ಪರವಾಗಿ ಮಾತಾಡುತ್ತಿದ್ದರು. ಸುಕೋಮಲ ಬಾಲಕರೊಡನೆ ಕಟ್ಟುಮಸ್ತಾದ ಜಟ್ಟಿಗಳು ಸೆಣಸುವುದು ಶುದ್ಧ ಅನ್ಯಾಯ. ಇಂತಹ ಅನ್ಯಾಯದಲ್ಲಿ ನಾವು ನೋಡುವುದರಲ್ಲಿ ಪಾಲುಗೊಳ್ಳಬಾರದು. ನಾವಿಲ್ಲಿಂದ ಹೊರಟು ಹೋಗೋಣ ಎಂದು ಅನೇಕರು ಅಲ್ಲಿಂದ ಎದ್ದು ಹೋದರು. ಹೆಂಗಸರ ಮಾತುಗಳನ್ನು ಪಕ್ಕದ ಕಾರಾಗೃಹದಲ್ಲಿದ್ದ ವಸುದೇವ, ದೇವಕಿಯರು ಕೇಳಿಸಿಕೊಂಡು ಆತಂಕಕ್ಕೊಳಗಾದರು. ವಾಸುದೇವನು ಚಾಣೂರನಿಗೆ ಅಂತ್ಯಕಾಣಿಸಲು ನಿಶ್ಚಯಿಸಿ ವಜ್ರಕಠಿನವಾದ ತನ್ನ ಕೈಗಳಿಂದ ಅವನಿಗೆ ಬಲವಾಗಿ ಹೊಡೆದನು. ಚಾಣೂರನ ಅಂಗಾಂಗಗಳು ಸಡಿಲಗೊಂಡವು. ಒಂದು ಕ್ಷಣ ಗ್ಲಾನಿಗೊಳಗಾಗಿ ಬಿದ್ದನು. ಆದರೆ ಗಿಡುಗನ ಹಾಗೆ ನೆಗೆದೆದ್ದು ಕೃಷ್ಣನ ಎದೆಗೆ ಪ್ರಹಾರ ಮಾಡಿದನು. ಅದು ಮಾಲೆಯಿಂದ ಆನೆಗೆ ಹೊಡೆದಂತಾಯಿತು. ಕೂಡಲೇ ಕೃಷ್ಣನು ಅವನನ್ನು ಎತ್ತಿ ಹಿಡಿದುಗೊಂಡು ಗರಗರನೆ ತಿರುಗಿಸಿ ನೆಲಕ್ಕೆ ಕೆಡವಿದನು. ಅಷ್ಟರೊಳಗೇ ಅವನ ಪ್ರಾಣ ಹೊರಟು ಹೋಗಿತ್ತು. ಮುಷ್ಟಿಕನು ಬಲರಾಮನಿಗೆ ಜೋರಾಗಿ ಮುಷ್ಟಿಪ್ರಹಾರ ಮಾಡಿದನು. ಪ್ರತಿಯಾಗಿ ಬಲಭದ್ರನು ಅವನಿಗೆ ಮಾರಕವಾಗಿ ಏಟುಕೊಟ್ಟನು. ಮುಷ್ಟಿಕನು ನೆತ್ತರು ಕಕ್ಕುತ್ತಾ ಸತ್ತು ನೆಲಕ್ಕುರುಳಿದನು. ಬಳಿಕ ಕೂಟ, ಶಲ, ತೋಶಲ ಎಂಬ ಜಟ್ಟಿಗಳೂ ಕಾಳಗಕ್ಕೆ ಬಂದು ಮಣ್ಣುಮುಕ್ಕಿದರು. ಆಗ ಉಳಿದ ಜಟ್ಟಿಗಳು ಜೀವಭಯದಿಂದ ಅಲ್ಲಿಂದ ಓಡಿಹೋದರು. ಇದಾದ ಬಳಿಕ ರಾಮ, ಕೃಷ್ಣರು ಗೊಲ್ಲಬಾಲಕರನ್ನು ಕರೆದು ಅವರೊಡನೆ ಜಟ್ಟಿ ಕಾಳಗದ ಆಟವನ್ನಾಡಿದರು. ಜನರು ಸಂತಸದಿಂದ ಹುಚ್ಚೆದ್ದು ಕುಣಿದಾಡಿದರು. ಆಗ ಕಂಸನು ಕೋಪೋದ್ರಿಕ್ತನಾಗಿ ವಾದ್ಯಗಳನ್ನೆಲ್ಲ ನಿಲ್ಲಿಸಿ ರಾಮ, ಕೃಷ್ಣರನ್ನು ಊರಿಂದ ಹೊರಗೆ ಅಟ್ಟಬೇಕೆಂದೂ, ನಂದಾದಿಗಳ ಸಂಪತ್ತನ್ನು ಕಿತ್ತುಕೊಂಡು ಅವರನ್ನು ಬಂಧಿಸಬೇಕೆಂದೂ ಆಜ್ಞಾಪಿಸಿದನು. ಅಲ್ಲದೆ ವಸುದೇವನನ್ನೂ, ತನ್ನ ತಂದೆಯಾದ ಉಗ್ರಸೇನನನ್ನೂ ಕೊಲ್ಲಬೇಕೆಂದು ಅಪ್ಪಣೆ ಮಾಡಿದನು. ಹೀಗೆಲ್ಲ ಕಂಸನು ಗಳಹುವಾಗ ಶ್ರೀಕೃಷ್ಣನು ಕುಪಿತನಾಗಿ ಸುಲಭವಾಗಿ ಕಂಸನಿದ್ದ ಎತ್ತರದ ವೇದಿಕೆಯ ಮೇಲೆ ಜಿಗಿದು ನಿಂತನು.

(ಮುಂದುವರಿಯುವುದು)

## ಹೊಸ ಬೆಳಕು

**ನಲ್ನುಡಿ :**

**ದೀಪ್ಯತೇ ಇತಿ ದೀಪಃ ದೀಪಯತಿ ಇತಿ ದೀಪಃ ।**

ಅಂದರೆ ದೀಪ ಸ್ವಯಂ ಬೆಳಗಿ ಇನ್ನೊಬ್ಬರನ್ನು ಬೆಳಗಿಸುತ್ತದೆ.

**ಪುಸ್ತಕ ಪರಿಚಯ :**

''ತೆಕ್ಕುಂಜೆ ಗೋಪಾಲಕೃಷ್ಣ ಭಟ್ಟ''
-ನಂದಳಿಕೆ ಬಾಲಚಂದ್ರರಾವ್
*ಪ್ರಕಾಶಕರು :*
ಕಾಂತಾವರ ಕನ್ನಡ ಸಂಘ,
ಕಾಂತಾವರ, ಕಾರ್ಕಳ
*ಬೆಲೆ :* ರೂ.33/-

ನಂದಳಿಕೆ ಬಾಲಚಂದ್ರರಾವ್‌ರವರು ಮಹಾಕವಿ ಮುದ್ದಣನ ನಂದಳಿಕೆ ಊರಿನವರು. ಇವರು ಮಂಗಳೂರು ಕರ್ಣಾಟಕ ಬ್ಯಾಂಕಿನ ಪ್ರಾದೇಶಿಕ ಕಚೇರಿಯಲ್ಲಿ ಅಧಿಕಾರಿಗಳು. 1979ರಲ್ಲಿ ಮುದ್ದಣ ಸ್ಮಾರಕ ಮಿತ್ರ ಮಂಡಳಿಯ ಸ್ಥಾಪಕ ಗೌರವಾಧ್ಯಕ್ಷರು. ನಂದಳಿಕೆಯಲ್ಲಿ 1958ರಲ್ಲಿ ಶಿಲಾನ್ಯಾಸಗೊಂಡು ಅಷ್ಟಕ್ಕೇ ನಿಂತಿದ್ದ ಮುದ್ದಣ ಸ್ಮಾರಕ ಮಂದಿರ ಯೋಜನೆಯನ್ನು ಅದಕ್ಕಂಟಿದ ಬಾಲಗ್ರಹ ಪೀಡೆಯಿಂದ ಮುಕ್ತಗೊಳಿಸಿದ ಮಾಂತ್ರಿಕ. 1987ರಲ್ಲಿ ಸುಮಾರು ಮೂರು ಲಕ್ಷ ವೆಚ್ಚದಲ್ಲಿ ಭವ್ಯವಾದ 'ಮುದ್ದಣ ಸ್ಮಾರಕ ಭವನ' ಕಟ್ಟಿ ನಿಲ್ಲಿಸಿದ ಸಾಧಕ. 1995ರಿಂದ 'ಮುದ್ದಣ ಪುರಸ್ಕಾರ ವಿದ್ವತ್ ಸಂಮಾನ' ಪರಂಪರೆಯ ಸಂಯೋಜಕ.... ಕವಿ ಮುದ್ದಣ ಸ್ಮಾರಕ ರಚನೆಗಾಗಿ ಡಾ। ಶಿವರಾಮ ಕಾರಂತರಿಂದ ಹುಟ್ಟೂರು ಸಂಮಾನ; ಉದಯವಾಣಿ ವಿಂಶತಿ, ಪ್ರಶಸ್ತಿ; ಸಂದೇಶ ರಾಜ್ಯ ಪ್ರಶಸ್ತಿ; ಪಂಪ ಪ್ರತಿಷ್ಠಾನ ದಾವಣಗೆರೆಯಿಂದ 'ಸಾಂಸ್ಕೃತಿಕ ಶ್ರೀ' ಪ್ರಶಸ್ತಿ; ಮುದ್ದಣ 125 ಸಂಸ್ಮರಣೆ ಉಡುಪಿಯಲ್ಲಿ ಕುಶಿಯವರಿಂದ ಸಂಮಾನ-ಹೀಗೆಲ್ಲ ಬಹುಮಾನ - ಹೀಗೆಂದು ಈ ಕೃತಿಯಲ್ಲಿ ನಂದಳಿಕೆ ಬಾಲಚಂದ್ರರಾವ್ ಬಗ್ಗೆ ವಿ.ಗ.ನಾಯಕ ತಿಳಿಸುತ್ತಾರೆ.

ದಕ್ಷಿಣ ಕನ್ನಡದ ಪಂಡಿತ ಪರಂಪರೆಯಲ್ಲಿ ತೆಕ್ಕುಂಜ ಗೋಪಾಲಕೃಷ್ಣ ಭಟ್ಟರದು ಬಹು ಅಮೂಲ್ಯವಾದ ಸ್ಥಾನ. ಪಂಡಿತ ಮುಳಿಯ ತಿಮ್ಮಪ್ಪಯ್ಯ, ಕುಕ್ಕಿಲಕೃಷ್ಣ ಭಟ್ಟ, ಸೇಡಿಯಾಪು ಕೃಷ್ಣ ಭಟ್ಟ ಮುಂತಾದವರ ಸಾಲಿನಲ್ಲಿ ಸರಿದೊರೆಯಾಗಿ ನಿಲ್ಲಬಲ್ಲ ಹೆಸರು ಅವರದು. ಮೈಸೂರು ಕರ್ನಾಟಕದಲ್ಲಿ ಡಿ.ಎಲ್. ನರಸಿಂಹಾಚಾರ್ಯರು ಹೇಗೋ ಹಾಗೆ ಕರಾವಳಿ ಕರ್ನಾಟಕದಲ್ಲಿ ತೆಕ್ಕುಂಜದವರು. ಕನ್ನಡ ಭಾಷಾ ಮರ್ಯಾದೆಯನ್ನು ಕಾಪಾಡುವಲ್ಲಿ ಅವರ ಪಾತ್ರ ತುಂಬಾ ಮಹತ್ತರವಾದುದು. ಪಂಡಿತವರೇಣ್ಯ ಮುಳಿಯ ತಿಮ್ಮಪ್ಪಯ್ಯನವರ ಗರಡಿಯಲ್ಲಿ ಪಳಗಿ ಸೇಡಿಯಾಪು ಕೃಷ್ಣಭಟ್ಟರಂತಹ ವಿದ್ವಾಂಸರ ಸಾಹಚರ್ಯದಲ್ಲಿ ಮೆರೆದ ಪ್ರಾಚಾರ್ಯ ತೆಕ್ಕುಂಜದವರು ಕನ್ನಡವನ್ನು ಕಟ್ಟಿ ಬೆಳೆಸಿದವರು. ತಲಸ್ಪರ್ಶಿಯಾದ ವಿಶ್ಲೇಷಣ ವಿಧಾನಗಳಿಂದ, ನಿಷ್ಪಕ್ಷಪಾತವಾದ ಖಚಿತ ಅಭಿಪ್ರಾಯಗಳಿಂದ ಸಮುದಾಯವನ್ನು ಮುನ್ನಡೆಸಿದವರು. ಅನೇಕ ವಿದ್ಯಾರ್ಥಿಗಳಲ್ಲಿ ಕನ್ನಡ ಪ್ರೀತಿಯನ್ನು ಬಿತ್ತಿ ಶಬ್ದಾರ್ಥ ವಿಹಾರದ ಹೊಸ ದಾರಿಯಲ್ಲಿ ಸಾಗಿ ಪಂಡಿತರೆಂದರೆ ಹೀಗಿರಬೇಕು ಎಂಬುದನ್ನು ತೋರಿಸಿ ಕೊಟ್ಟವರು ಎಂದು ಈ ಕೃತಿಯಲ್ಲಿ ತೆಕ್ಕುಂಜ ಗೋಪಾಲಕೃಷ್ಣ ಭಟ್ಟರ ಬಗ್ಗೆ ತಿಳಿಸಲಾಗಿದೆ.

ತೆಕ್ಕುಂಜೆ ಎಂಬುದು ಗೋಪಾಲಕೃಷ್ಣ ಭಟ್ಟರ ಮನೆಯ ಹೆಸರು. ಸದಾ ಭಾಷೆ, ವ್ಯಾಕರಣ, ಛಂದಸ್ಸುಗಳ ವಿಷಯವನ್ನೇ ಧ್ಯಾನಿಸುತ್ತಾ ಇದ್ದ ತೆಕ್ಕುಂಜ ಈಗ ನಮ್ಮೊಡನಿಲ್ಲ. ಆದರೆ ಅವರ ಭಾಷಾ ಕೈಂಕರ್ಯದ ಆದರ್ಶ ನಮ್ಮ ಕಣ್ಣ ಮುಂದಿದೆ.

– ವೈ. ಮೋಹನ ರಾವ್.

**ಶ್ರೀಶಾರದಾ ವೇದಿಕೆಯ ಮಹಾ ಪೋಷಕರು :** ಅಂಬಲಪಾಡಿ ಕೃಷ್ಣ ರಾವ್, ಡಾ। ಪಿ. ವಿಠ್ಠಲ ರಾವ್ ಮಣಿಪಾಲ, ಕೆ. ರಮೇಶ ಶ್ಯಾನುಭಾಗ್ ಸತಾರ, ಟಿ. ಆರ್. ಶ್ಯಾನುಭಾಗ್ ಬೆಂಗಳೂರು, ನಳಿನಿ ಆರ್. ಶ್ಯಾನುಭಾಗ್ ಬೆಂಗಳೂರು, ದಿ। ಕುಂಜಾರು ವಿಠ್ಠಲ ರಾವ್ ಮುಂಬೈ, ಶ್ಯಾಮರಾವ್ ಅಲೆವೂರು, ವೈ. ಮುರಳೀಕೃಷ್ಣ ರಾವ್ ಉಡುಪಿ, ಸಿ. ಸರ್ವೋತ್ತಮ ರಾವ್ ಚಿಟ್ಪಾಡಿ, ಎಂ. ಸದಾನಂದ ರಾವ್ ಚಿಟ್ಪಾಡಿ, ಡಾ। ವೈ. ಚಂದ್ರಶೇಖರ ರಾವ್ ಕುಕ್ಕಿಕಟ್ಟೆ, ಬಿ. ಎಂ.ಸಂಜೀವ ರಾವ್ ಮಂಗಳೂರು, ಎನ್.ಡಿ. ಜಗನ್ನಾಥ ರಾವ್ ಬೆಂಗಳೂರು, ಕೆ. ಬಿ. ರವಿಶಂಕರ್‌ರಾವ್ ಮಂಗಳೂರು, ಪಿ. ಆರ್. ಸದಾಶಿವ ರಾವ್ ಬೆಂಗಳೂರು, ಬೆಳ್ಮಣ್ ವಾಸುದೇವ ರಾವ್ ಉಡುಪಿ, ಕುಡುಪು ನಾರಾಯಣ ರಾವ್ ಸತಾರ, ಎ. ಕೃಷ್ಣಮೂರ್ತಿ ರಾವ್ ಆಳುಗ್ಗೇಲು, ಶ್ರೀಮತಿ ಸರೋಜಿನಿ ದೇವರಾವ್ ನಂದಿಕೂರು, ಡಾ। ಪರೀಕ ಗೋಪಾಲಕೃಷ್ಣರಾವ್ ಮಾರ್ಪಳ್ಳಿ ಉಡುಪಿ, ಕೆ. ಭಾಸ್ಕರರಾವ್ ಉಡುಪಿ, ಕೆ. ವೇಣುಗೋಪಾಲರಾವ್ ಅಂಬಲ್ಪಾಡಿ, ಬಿ. ಕೃಷ್ಣಮೂರ್ತಿರಾವ್ ಅಂಬಲ್ಪಾಡಿ, ಶ್ರೀಮತಿ ವಿಜಯಾ ಆರ್.ರಾವ್ ಮುಂಬಯಿ, ಪ್ರೊ। ತಂತ್ರಾಡಿ ನಾರಾಯಣ ಶ್ಯಾನುಭಾಗ್.

## ಶ್ರೀಶಾರದಾ ಮಂಟಪದಲ್ಲಿ ವಿಜಯದಶಮಿ-ಚಂಡಿಕಾಹೋಮ-ಯಕ್ಷಗಾನ

(....1ನೇ ಪುಟದಿಂದ)

ಬೆಳಿಗ್ಗೆ 10 ಗಂಟೆಗೆ ಸಂಘದ ಪೂರ್ವಾಧ್ಯಕ್ಷರು ಹಾಗೂ ಸಂಘದ ಸಲಹೆಗಾರರಾದ ಡಾ। ಪಿ. ವಿಠಲ ರಾವ್ ಇವರು ದೀಪ ಬೆಳಗಿಸಿ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಸಂಘದ ಅಧ್ಯಕ್ಷರು, ಕಾರ್ಯದರ್ಶಿ ಹಾಗೂ ಇತರ ಪದಾಧಿಕಾರಿಗಳು ಉಪಸ್ಥಿತರಿದ್ದರು.

**ಬಹುಮಾನ ವಿತರಣೆ - ಉದಯ ಚಂದ್ರ ಪ್ರತಿಭಾ ಪುರಸ್ಕಾರ :**

ಭೋಜನಾನಂತರ ನಡೆದ ಸಭಾ ಕಾರ್ಯಕ್ರಮದಲ್ಲಿ ವಿಜಯದಶಮಿ ಪ್ರಯುಕ್ತ ನಮ್ಮ ಸಮಾಜದ ವಿದ್ಯಾರ್ಥಿಗಳು ಮತ್ತು ಹಿರಿಯರಿಗಾಗಿ ಏರ್ಪಡಿಸಿದ ವಿವಿಧ ಸ್ಪರ್ಧೆಗಳ ವಿಜೇತರಿಗೆ ಬಹುಮಾನ ವಿತರಣೆ ಹಾಗೂ ಉದಯಚಂದ್ರ ಪ್ರತಿಭಾ ಪುರಸ್ಕಾರ ವಿಜೇತರಿಗೆ ಪುರಸ್ಕಾರ ನೀಡಲಾಯಿತು. ಬಹುಮಾನ ವಿತರಣೆಯನ್ನು ಸಂಘದ ಅಧ್ಯಕ್ಷರಾದ ಸಿ.ಎಸ್. ರಾವ್ ನೆರವೇರಿಸಿದರು. ಸ್ವಾಗತಿಸಿದ ಅವರು ಸಮಾಜದ ಪ್ರತಿಭೆಗಳನ್ನು ಗುರುತಿಸಲು ಇಂತಹ ಕಾರ್ಯಕ್ರಮಗಳು ಸಹಕಾರಿ ಎಂದರು. ಬಹುಮಾನಿತರ ಪಟ್ಟಿಯನ್ನು ಶ್ರೀ ಪ್ರಭಾಕರ ಬಂಡಿ ಓದಿದರು. ಕಾರ್ಯಕ್ರಮವನ್ನು ಶ್ರೀ ಅರವಿಂದ ಕುಮಾರ್ ಮತ್ತು ಶ್ರೀ ಪ್ರಭಾಕರ ಬಂಡಿಯವರು ನಿರ್ವಹಿಸಿದರು. ಸಂಘದ ಕಾರ್ಯದರ್ಶಿ ಶ್ರೀ ಬಿ. ಕೃಷ್ಣಮೂರ್ತಿ ರಾವ್ ಧನ್ಯವಾದವಿತ್ತರು.

**ಉದಯಚಂದ್ರ ಪ್ರತಿಭಾ ಪುರಸ್ಕೃತರು :**

1) **ಶ್ರೀ ಆದರ್ಶ ಕೆ.ಕೆ.** (SSLC) 2) **ಶ್ರೀ ರಾಕೇಶ್ ಎನ್.ಆರ್. ಮತ್ತು ಅನುರಾಧಾ ಎನ್** (PUC) 3) **ಪ್ರೀತಿಕಾ ಪಿಲಿಂಜ** (B.A.LAW)

**ವಿವಿಧ ಸ್ಪರ್ಧೆಗಳ ವಿಜೇತರು :**

ಕಂಠಪಾಠ ಸ್ಪರ್ಧೆ (7ನೇ ತರಗತಿ ವರೆಗೆ) 1) ಶಮಾತ್ಮಿಕ ರಾವ್ 2) ಸ್ವಾತಿ ರಾವ್

ಕಂಠಪಾಠ ಸ್ಪರ್ಧೆ (8ನೇ ತರಗತಿ ಮೇಲ್ಪಟ್ಟು) : 1) ಕೆ. ರಕ್ಷಿತಾ 2) ಅರುಣ್ ರಾವ್ 3) ಪ್ರಗತಿ ಭಂಡಿ

ಭಕ್ತಿಗೀತೆ ಸ್ಪರ್ಧೆಗಳು : (4ನೇ ತರಗತಿ ವರೆಗೆ) 1) ಲಹರಿ ರಾವ್ 2) ದ್ರುಪದ್ ರಾವ್ 3) ಆರ್. ಸಂಹಿತ್

ಭಕ್ತಿಗೀತೆ ಸ್ಪರ್ಧೆಗಳು : (5 ರಿಂದ 7 ತರಗತಿ ವರೆಗೆ) 1) ಸಾಗರ್ ಪಿ. 2) ವೆ. ಮಾನಸ ರಾವ್ 3) ವಂದನಾ ರಾವ್

ಭಕ್ತಿಗೀತೆ ಸ್ಪರ್ಧೆಗಳು : (8ನೇ ತರಗತಿ ಮೇಲ್ಪಟ್ಟು) 1) ಗೌತಮಿ ಕೆ. 2) ವೈ. ದೀಕ್ಷಾ ರಾವ್ 3) ಶ್ರವಣ್‌ಕುಮಾರ್

ಹೂ ಜೋಡಿಸುವುದು : 1) ಶ್ರೀಮತಿ ವಾಣಿ ಬಂಡಿ 2) ಶ್ರೀಮತಿ ಪ್ರಸನ್ನ ಲಕ್ಷ್ಮೀ ರಾವ್ 3) ಪ್ರಗತಿ ಬಂಡಿ

ರಂಗವಲ್ಲಿ (4ನೇ ತರಗತಿ ವರೆಗೆ) : 1) ಸುದೇಷ್ಣ ರಾವ್ 2) ವಿಪುಲ್ ರಾವ್ 3) ಪ್ರೇರಣಾ ರಾವ್

ರಂಗವಲ್ಲಿ (5 ರಿಂದ 7 ತರಗತಿ ವರೆಗೆ) : 1) ಮಹಿಮಾ ಎನ್.ರಾವ್ 2) ಕವನ ಯು. ರಾವ್ 3) ಅಪೂರ್ವ ರಾವ್

ರಂಗವಲ್ಲಿ (8ನೇ ತರಗತಿ ನಂತರ) : 1) ದೀಕ್ಷಾ ರಾವ್ 2) ಗೌತಮಿ ಕೆ. 3) ಭಾಗ್ಯಶ್ರೀ ರಾವ್

ಚೂರ್ಣಿಕ ಹೇಳುವುದು : 1) ಗಾಯತ್ರಿ ದಿನಮಣಿ ಶಾಸ್ತ್ರಿ 2) ಗೌತಮಿ ಕೆ. 3) ಪ್ರಗತಿ ಬಂಡಿ

ಚಿತ್ರಕಲೆ (4ನೇ ತರಗತಿ ವರೆಗೆ): 1) ವಿಪುಲ್ ರಾವ್ 2) ಸುದೇಷ್ಣ ರಾವ್ 3) ಲಹರಿ ರಾವ್

ಚಿತ್ರಕಲೆ (5 ರಿಂದ 7ನೇ ತರಗತಿ ವರೆಗೆ) : 1) ಸಹನಾ ಶಾಸ್ತ್ರಿ 2) ವೈಷ್ಣವಿ ಹೆಬ್ಬಾರ್ 3) ಪ್ರಿಯಾ ರಾವ್ ಕೆ.

ಚಿತ್ರಕಲೆ (8ನೇ ತರಗತಿ ನಂತರ) : 1) ವರುಣ್‌ರಾವ್ ಕೆ. 2) ಅಶ್ವಿನಿ ಶಾಸ್ತ್ರಿ 3) ಶ್ರವಣ್‌ಕುಮಾರ್

ಛದ್ಮವೇಷ ಸ್ಪರ್ಧೆ (4ನೇ ತರಗತಿ ವರೆಗೆ) : 1) ವಿನೇಶ್ 2) ಪ್ರೇರಣಾ 3) ರೋಹಿತ್

ಛದ್ಮವೇಷ ಸ್ಪರ್ಧೆ (5 ರಿಂದ 7ನೇ ತರಗತಿ) : 1) ವೈಷ್ಣವಿ ಹೆಬ್ಬಾರ್ 2) ಮಹಿಮಾ ಎಸ್.ರಾವ್ 3) ಸ್ವಾತಿ ರಾವ್

ಛದ್ಮವೇಷ ಸ್ಪರ್ಧೆ (8-10ನೇ ತರಗತಿ) : 1) ಶ್ರವಣ್‌ಕುಮಾರ್ ರಾವ್

ತೀರ್ಪುಗಾರರಾಗಿ ಸಹಕರಿಸಿದವರು- ಶ್ರೀ ವಿಕ್ರಂ ಆಚಾರ್ಯ, ಅಧ್ಯಾಪಕರು ಉದ್ಯಾವರ ; ರಘುವೀರ ಆಚಾರ್ಯ, ನಿವೃತ್ತ ಅಂಚೆ ಪಾಲಕರು ಉಡುಪಿ; ಶ್ರೀಮತಿ ಜಯಾ ಆಚಾರ್ಯ, ನಿವೃತ್ತ ಸಿಂಡಿಕೇಟ್ ಬ್ಯಾಂಕ್ ಅಧಿಕಾರಿ ಉಡುಪಿ; ಶ್ರೀ ಕೆ. ವೇಣುಗೋಪಾಲ ರಾವ್; ಶ್ರೀ ಪ್ರಭಾಕರ ಭಂಡಿ; ಶ್ರೀ ಕೃಷ್ಣ ಕುಮಾರ್ ರಾವ್, ಮಟ್ಟು

ಕಾರ್ಯಕ್ರಮ ನಿರ್ವಹಣೆ- ಮಾ। ವಾಗೀಶ ರಾವ್, ಮಾ। ವ್ಯಾಸರಾವ್, ಮಾ। ಪವನ ಎ. ರಾವ್, ಕು। ವೃಂದಾ ಕೆ. ರಾವ್, ಮಟ್ಟು

**ಯಕ್ಷಗಾನ-ಮಧುರಾ ಮಹೀಂದ್ರ :**

ಶ್ರೀ ಶಾರದಾ ಹವ್ಯಾಸಿ ಯಕ್ಷಗಾನ ಮಂಡಳಿ, ಶಾರದಾ ಮಂಟಪ, ಕುಂಜಿಬೆಟ್ಟು, ಉಡುಪಿ ಇವರಿಂದ ಸಂಜೆ 7ರಿಂದ 10ರ ವರೆಗೆ ಮಧುರಾ ಮಹೀಂದ್ರ ಎಂಬ ಪೌರಾಣಿಕ ಪ್ರಸಂಗವು ಯಶಸ್ವಿಯಾಗಿ ಪ್ರದರ್ಶಿಸಲ್ಪಟ್ಟಿತು. ಸಭೆಯಲ್ಲಿ ಯಕ್ಷಗಾನದ ಪ್ರಾಯೋಜಕರಾದ ಉಡುಪಿಯ ಖ್ಯಾತ ಲೆಕ್ಕಪರಿಶೋಧಕರಾದ ಶ್ರೀ ಕೆ. ಗಣೇಶ್ ಹೆಬ್ಬಾರ್‌ರನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮವನ್ನು ಕೆ.ವೇಣುಗೋಪಾಲರಾವ್ ನಿರೂಪಿಸಿ ಧನ್ಯವಾದವನ್ನಿತ್ತರು. ಪ್ರಸಂಗ ವನ್ನು ಯಕ್ಷಗಾನ ಕೇಂದ್ರದ ಗುರುಗಳಾದ ಶ್ರೀ ದೇವದಾಸ ಕೂಡ್ಲಿ ಹಾಗೂ ಶ್ರೀ ಮಂಜುನಾಥ ಕುಲಾಲ ಇವರು ನಿರ್ದೇಶಿಸಿದ್ದರು. ಹಿಮ್ಮೇಳದಲ್ಲಿ ನಮ್ಮವರೇ ಆದ ಪ್ರವೀಣ್‌ಕುಮಾರ್ ಹಾಗೂ ಚಂದ್ರಕಾಂತ ರಾವ್ ಭಾಗವತರಾಗಿ ನಡೆಸಿಕೊಟ್ಟರು. ಶ್ರೀ ಬ್ರಹ್ಮಲಿಂಗೇಶ್ವರ ಯಕ್ಷಗಾನ ಮಂಡಳಿ ಬಾರ್ಕೂರು ಇವರು ವೇಷಭೂಷಣದ ವ್ಯವಸ್ಥೆ ಮಾಡಿದ್ದರು. ಬಿ. ಕೃಷ್ಣಮೂರ್ತಿರಾವ್, ಬ್ರಹ್ಮಾವರ ಇವರು ವೇಷ ಭೂಷಣದಲ್ಲಿ ಸಹಕರಿಸಿದರು. ಯಕ್ಷಗಾನವು ಅದ್ದೂರಿಯಾಗಿ ನಡೆದು ಸರ್ವರ ಪ್ರಶಂಸೆಗೆ ಪಾತ್ರವಾಯಿತು.

ಯಕ್ಷಗಾನದಲ್ಲಿ ಭಾಗವತರಾಗಿ ನಮ್ಮ ಸಮಾಜದ ಪ್ರತಿಭಾನ್ವಿತ ಯುವ ಕಲಾವಿದರಾದ ಶ್ರೀ ಪ್ರವೀಣ್‌ಕುಮಾರ್ ಕುಕ್ಕಿಕಟ್ಟೆ ಮತ್ತು ಚಂದ್ರಕಾಂತ್‌ರಾವ್ ಮೂಡುಬೆಳ್ಳೆ, ಮದ್ದಳೆಗಾರರಾಗಿ ಶ್ರೀ ರತ್ನಾಕರ ಶೆಣೈ ಉಡುಪಿ, ಚೆಂಡೆಯಲ್ಲಿ ಶ್ರೀ ರತ್ನಾಕರ ಆಚಾರ್ ಉಡುಪಿ ಇವರು ಸಹಕರಿಸಿದರು.

**ಪಾತ್ರವರ್ಗ** :- ಪ್ರಾರ್ಥನೆ (ಕೋಡಂಗಿ) ಕು। ಪಲ್ಲವಿ ರಾವ್, ಪೀಠಿಕಾ ಸ್ತ್ರೀವೇಷ- ಕು। ವೃಂದಾ ಹಾಗೂ ಕು। ಅನುಶ್ರೀ, ದೇವೇಂದ್ರ-ಪವನಕುಮಾರ್ ಚಿಟ್ಪಾಡಿ, ವಾಯು-ಆಕಾಶ್ ಮಾರ್ಪಳ್ಳಿ, ಅಗ್ನಿ-ವೈಷ್ಣವಿ ಹೆಬ್ಬಾರ್, ನಿರುತಿ-ಕಾರ್ತಿಕೇಯ ರಾವ್, ವರುಣ-ಪ್ರಿಯಾರಾವ್ ಮಣಿಪಾಲ, ಬಾಲ ಕಂಸ- ಅನುದೀಪ್ ಕುಮಾರ್, ಮಣಿಪಾಲ, ನಾರದ-ಸತೀಶ್ ಭಟ್, ಜರಾಸಂಧ- ಟಿ. ವಿಶ್ವನಾಥ ಶ್ಯಾನುಭೋಗ್ ಇಂದ್ರಾಳಿ, ಆಸ್ತಿ ಪಾಸ್ತಿ-ಕು। ವೃಂದಾ ಹಾಗೂ ಕು। ಅನುಶ್ರೀ, ಪಟ್ಟಾಭಿಷೇಕ ಕಂಸ-ವ್ಯಾಸರಾವ್ ಕಲ್ಮಂಜೆ, ಅಕ್ರೂರ-ವೈ.ಮೋಹನರಾವ್, ಅಂಬಲಪಾಡಿ, ವಧಾಕಂಸ-ಕೃಷ್ಣಕುಮಾರ್ ಮಟ್ಟು, ರಜಕ- ವ್ಯಾಸರಾವ್ ಕಲ್ಮಂಜೆ, ಕೃಷ್ಣ-ಟಿ. ವಾಗೀಶ ರಾವ್ ನಿಟ್ಟೂರು, ಬಲರಾಮ-ಟಿ.ಸ್ವಾತಿ ರಾವ್ ನಿಟ್ಟೂರು, ಚಾಣೂರ-ಅರವಿಂದ ಕುಮಾರ್ ಮಣಿಪಾಲ, ಮುಷ್ಟಿಕ- ಅಜಿತ್‌ರಾವ್, ಬೈಲೂರು.

ಯಕ್ಷಗಾನವು ಯಶಸ್ವಿಗೊಳ್ಳಲು ಸಹಕರಿಸಿದ ನಮ್ಮ ಸಂಘದ ಆಡಳಿತ ಮಂಡಳಿ, ಯಕ್ಷಗಾನ ಕೇಂದ್ರ, ಕುಂಜಿಬೆಟ್ಟು, ಪ್ರಾಯೋಜಕರಾದ ಕೆ. ಗಣೇಶ್ ಹೆಬ್ಬಾರ್ ಅಂಬಲಪಾಡಿ, ವೇಷಭೂಷಣದಲ್ಲಿ ಸಹಕರಿಸಿದ ಬಿ.ಕೃಷ್ಣಮೂರ್ತಿರಾವ್, ಬ್ರಹ್ಮಾವರ ಇವರೆಲ್ಲರಿಗೂ ಶ್ರೀ ಶಾರದಾ ಹವ್ಯಾಸಿ ಯಕ್ಷಗಾನ ಮಂಡಳಿಯು ಕೃತಜ್ಞತೆಯನ್ನು ಸಲ್ಲಿಸುತ್ತದೆ.

## ಕಾಸರಗೋಡು : ಶಿವಬ್ರಾಹ್ಮಣ ಸಭಾದ ಹದಿನೈದನೆಯ ವಾರ್ಷಿಕೋತ್ಸವ



ಇತ್ತೀಚಿಗಿನ ದಿನಗಳಲ್ಲಿ ನಮ್ಮ ಭಾಗದಲ್ಲಿ ಬ್ರಾಹ್ಮಣರು ಆರ್ಥಿಕವಾಗಿ, ಸಾಂಸ್ಕೃತಿಕವಾಗಿ ಹಾಗೂ ಇನ್ನೆಲ್ಲಾ ಕ್ಷೇತ್ರಗಳಲ್ಲಿ ಮೇಲೆ ಬರುತ್ತಿದ್ದಾರೆ, ಪ್ರಗತಿಯನ್ನು ಸಾಧಿಸುತ್ತಿದ್ದಾರೆ. ಆದರೆ ಮಾನವೀಯ ನೆಲೆಗಳನ್ನು ಕಳೆದು ಕೊಳ್ಳುತ್ತಾ ಬರುತ್ತಿದ್ದಾರೆ ಎಂಬ ಆಶಂಕೆಯನ್ನು ಕುಂದಾಪುರ ತಾಲೂಕು ಸ್ಥಾನಿಕ ಸಂಘದ ಅಧ್ಯಕ್ಷರಾದ ದಯಾನಂದ ರಾವ್ ಅವರು ವ್ಯಕ್ತಪಡಿಸಿದರು. ಅವರು ಕಾಸರಗೋಡಿನ ಕುತ್ಯಾಳ ಗೋಪಾಲಕೃಷ್ಣ ದೇವಾಲಯದಲ್ಲಿ ನಡೆದ ಶಿವಬ್ರಾಹ್ಮಣ ಸಭಾದ 15ನೆಯ ವಾರ್ಷಿಕ ಸಮಾವೇಶದಲ್ಲಿ 'ವಿಳಾಸ ಕೈಪಿಡಿ'ಯನ್ನು ಬಿಡುಗಡೆಗೊಳಿಸಿ ಮಾತನಾಡುತ್ತಿದ್ದರು. ಇಂದು ವೃದ್ಧಾಶ್ರಮಗಳಲ್ಲಿ ನೆಲೆಸುತ್ತಿರುವವರು ಬಹುತೇಕ ಬ್ರಾಹ್ಮಣರೇ ಎಂಬ ಅಂಶ ಕಳವಳಕ್ಕೆ ಕಾರಣವಾಗಿದೆ ಎಂದವರು ಎತ್ತಿ ತೋರಿಸಿದರು.

ಶಿವ ಬ್ರಾಹ್ಮಣ ಸಭಾದ ಅಧಿವೇಶನವನ್ನು ಖ್ಯಾತ ಯಕ್ಷಗಾನ ಕಲಾವಿದ ಅಡೂರು ಶ್ರೀಧರ ರಾವ್ ದೀಪ ಬೆಳಗಿಸಿ ಉದ್ಘಾಟಿಸಿದರು. ಉಡುಪಿಯ ಎಂ.ಕೆ.ಎಸ್. ಶರ್ಮ 'ಶಿವಗಂಗಾ' ವಾರ್ಷಿಕ ಸಂಚಿಕೆಯನ್ನು ಬಿಡುಗಡೆಗೊಳಿಸಿದರು. ಮಂಗಳೂರಿನ ಸುಮನಾ ಕೃಷ್ಣ ಶುಭ ಹಾರೈಸಿದರು.


ನಂತರ ನಡೆದ ಸಮಾರೋಪ ಸಮಾರಂಭದಲ್ಲಿ ಭಾಗವಹಿಸಿದ ಬೆಂಗಳೂರಿನ ಸೆಂಟ್ರಲ್ ಎಕ್ಸೈಸ್ ಮತ್ತು ಕಸ್ಟಂಸ್‌ನ ಅಸಿಸ್ಟೆಂಟ್ ಕಮೀಶನರ್ ಹಿರಿಯಣ್ಣ ಶರ್ಮಾ ಇಂತಹ ಸಮಾರಂಭಗಳು ಉತ್ತಮ ಸಂದೇಶವನ್ನು ಕೊಡುತ್ತಿದೆ ಎಂದು ಅಭಿಪ್ರಾಯಪಟ್ಟರು. ಇನ್ನೋರ್ವ ಅತಿಥಿ ಗಳಾದ ಉಡುಪಿಯ ಡಾ। ವೈ. ಸುದರ್ಶನ ರಾವ್ ಇಂತಹ ಒಟ್ಟುಗೂಡುವಿಕೆ ಒಬ್ಬಾತನ ಜೀವನದಲ್ಲಿ ಸಾರ್ಥಕ್ಯದ ಭಾವನೆಗಳನ್ನು ಪ್ರಚೋದಿಸುತ್ತದೆ, ಆತ್ಮತೃಪ್ತಿಯನ್ನು ಕೊಡುತ್ತದೆ ಎಂದು ಅಭಿಪ್ರಾಯಪಟ್ಟರು.

ಬಳಿಕ ಸಮಾಜದ ಹಿರಿಯರಾದ ಚೇನಕ್ಕೊಡು ಇಂದಿರಾ, ತೆಕ್ಕಮೂಲೆ ನಾರಾಯಣಯ್ಯ ಹಾಗೂ ಉಬರಳೆ ಪಾರ್ವತಿ ಇವರನ್ನು ಸನ್ಮಾನಿಸಲಾಯಿತು. ವಿಭಿನ್ನ ಕ್ಷೇತ್ರಗಳಲ್ಲಿ ಸಾಧನೆಗೈದ ರಮೇಶ ಕೆ.ವಿ., ಡಾ। ಎ.ಪಿ.ಕೃಷ್ಣ, ಪ್ರೊ। ಶ್ರೀನಾಥ, ಜಗದೀಶ ಪಾರೆಕಟ್ಟ, ಚಂದ್ರಶೇಖರ ಶಾನುಭಾಗ ಇವರನ್ನು ಸನ್ಮಾನಿಸಲಾಯಿತು. ಮಾ। ಹರ್ಷಿತ್ ಕುಮಾರನಿಗೆ ಕಲಾಪ್ರತಿಭಾ ಪುರಸ್ಕಾರವನ್ನು, ಅಡೂರು ಸ್ವೀಕೃತಿ ಅವರಿಗೆ ಲಲಿತಕಲಾ ಪ್ರಶಸ್ತಿಯನ್ನು ನೀಡಲಾಯಿತು. ಸಮಾಜದ ಸಂಘಟನೆಗೆ ಹಲವು ರೀತಿಯಲ್ಲಿ ಸಹಕರಿಸಿದ ಸಮಾಜದ ಹಿರಿಯರಾದ ಏ.ವಿ.ಶ್ಯಾನುಭಾಗರಿಗೆ 'ಸಮಾಜ ರತ್ನ' ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು.

ಡಾ। ಪಿ.ಪಿ.ರಾವ್ ಕಾರ್ಯಕ್ರಮಗಳ ಅಧ್ಯಕ್ಷತೆ ವಹಿಸಿದರು. ಚಂದ್ರಶೇಖರ ಮರ್ಥಂಬೈಲ್, ಮಾಧುರಿ ಕಂಬಾರ್, ಎ.ಮನೋಹರ, ಕೃಪಾ ಕೆ.ಜಿ., ಶುಭಕರ ಶ್ಯಾನುಭಾಗ್, ಬಿ.ಜಿ.ರಾವ್, ಅಪೂರ್ವ ಚಿ.ನಾಡಿ, ಕೆ.ಜಿ. ಶ್ಯಾನುಭಾಗ್, ಶ್ವೇತ ನಾಗೇಶ್, ಸುಮಂಗಲ ಮನೋಹರ, ಮಾಲತಿ ಜಗದೀಶ, ಸುಕುಮಾರ ಅಲಂಪಾಡಿ, ವಸಂತರಾಜ ಪಟ್ಲ, ಅಕ್ಷತಾ, ಪ್ರೀತಿಕಾ, ರಾಜೇಂದ್ರ ಬಜಕೂಡ್ಲು, ಪ್ರಭಾರಮೇಶ್, ಮೊದಲಾದವರು ಕಾರ್ಯಕ್ರಮಗಳಲ್ಲಿ ಭಾಗವಹಿಸಿದರು.

ಮನೋರಂಜನ ಕಾರ್ಯಕ್ರಮಗಳಾದ ಹಾಸ್ಯ ವೈವಿಧ್ಯ, ಭಾವಗಾಯನ, ನೃತ್ಯಗಳು ಜರಗಿದವು. ಕಾರ್ಯಕ್ರಮದ ಅಂಗವಾಗಿ ನಡೆಸಿದ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನವನ್ನು ವಿತರಿಸಲಾಯಿತು.

## 6ನೇ ಅಕ್ಕ ವಿಶ್ವ ಕನ್ನಡ ಸಮ್ಮೇಳನ-2010




ಸಪ್ಟೆಂಬರ್ 3, 4, 5 - 2010 ಈ ಮೂರು ದಿನಗಳಲ್ಲಿ ಅಮೇರಿಕಾದ ನ್ಯೂಜೆರ್ಸಿಯಲ್ಲಿ 'ವೃಂದಾವನ' ಕನ್ನಡ ಕೂಟದ ಆಶ್ರಯದಲ್ಲಿ 6ನೇ ಅಕ್ಕ (ಅಮೇರಿಕಾದ ಕನ್ನಡ ಕೂಟಗಳ ಆಗರ) ವಿಶ್ವ ಕನ್ನಡ ಸಮ್ಮೇಳನ ನಡೆಯಿತು. ನೆರೆಯ ರಾಜ್ಯಗಳ 23 ಕನ್ನಡ ಕೂಟಗಳು ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು ಸುಮಾರು 4000 ಕನ್ನಡಿಗರು ಪಾಲ್ಗೊಂಡಿದ್ದರು.

ಶ್ರೀ ಸುಗುಣೇಂದ್ರ ತೀರ್ಥ ಸ್ವಾಮಿ, ಪುತ್ತಿಗೆ ಮಠ ಇವರಿಂದ ಉದ್ಘಾಟನೆಗೊಂಡ ಸಮ್ಮೇಳನದಲ್ಲಿ ಗುಬ್ಬಿವೀರಣ್ಣ, ರಾಣಿ ಚೆನ್ನಮ್ಮ, ಶಾಂತಲ, ಕೆಂಪೇಗೌಡ, ಪುರಂದರ ಮುಂತಾದ ಭವನಗಳಲ್ಲಿ ಪೂರ್ವಾಹ್ನ 9-30ರಿಂದ ರಾತ್ರಿ 9-30ರ ವರೆಗೆ ವೈವಿಧ್ಯಮಯ ಸಾಂಸ್ಕೃತಿಕ ಹಾಗೂ ಸಾಹಿತ್ಯಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. ಮೈಸೂರು ಅನಂತಸ್ವಾಮಿ ಮಕ್ಕಳಿಂದ ಸುಗಮ ಸಂಗೀತ, ರಮೇಶ್‌ನಾಥ್ ಕದ್ರಿಯವರ ಸ್ಯಾಕ್ಸೋಫೋನ್ ವಾದನ, ಡಾ। ಬಾಲಮುರಳಿ ಕೃಷ್ಣ ಹಾಗೂ ಶ್ರೀ ವಿದ್ಯಾಭೂಷಣರವರಿಂದ ಭಕ್ತಿ ಸಂಗೀತ, ಕರ್ನಾಟಕ ಕಲಾದರ್ಶಿನಿಯ ಬಾಲಕಲಾವಿದರಿಂದ ಯಕ್ಷಗಾನ ಮುಂತಾದ ಗಮನ ಸೆಳೆಯುವ ಕಾರ್ಯಕ್ರಮಗಳಿದ್ದವು. ಸಮ್ಮೇಳನದ ಮೂರು ದಿನಗಳಲ್ಲಿ ರುಚಿಕರವಾದ ಊಟ ಉಪಹಾರ ವ್ಯವಸ್ಥೆ ಮಾಡಲಾಗಿತು.

ಶ್ರೀಯುತ ಕೃಷ್ಣರಾವ್ ನಂದಳಿಕೆ, ಶ್ರೀಮತಿ ಶಾರದ ಕೃಷ್ಣರಾವ್, ಡಾ। ಶ್ರೀಹರ್ಷ ಎಮ್.ಎಲ್. ಮೈಸೂರು (ಫಿಸೀಶಿಯನ್, M.M.C. BROOKLYN, NY) ಡಾ। ಕಿರಣ್ ನಂದಳಿಕೆ (ಶಿಶುತಜ್ಞ, M.C.H. BRONX, NY), ಇವರು ಈ 6ನೇ ವಿಶ್ವಕನ್ನಡ ಸಮ್ಮೇಳನದಲ್ಲಿ ಭಾಗವಹಿಸಿದರು.

# "ಹರಿಕಥೆ" ಅಪೇಕ್ಷಿತವೇ? ಅನಪೇಕ್ಷಿತವೇ?-೮



**- ಹರಿದಾಸ ಮ.ನಾ.ಹೆಬ್ಬಾರ**
**ಎಂ.ಎ., ಬಿ.ಎಡ್.**

ಸಾಹಿತ್ಯ ಭಾಗದ ಪ್ರಸಾರ: ಹರಿಕಥೆಗಾಗಿ ಹರಿದಾಸನು ಆಯ್ದುಕೊಳ್ಳುವ ಕಥಾಭಾಗವು ಕನ್ನಡ ಯಾ ಸಂಸ್ಕೃತ ಸಾಹಿತ್ಯದಲ್ಲಿ ಪ್ರಖ್ಯಾತ ವಾಗಿರುವ ಯಾವುದೇ ಪುರಾಣ ಭಾಗದ ಕಥೆಯಾಗಿರಬೇಕು. ಅಂತಹ ಕಥೆಯನ್ನು ಯಾವ ಪುರಾಣ ಗ್ರಂಥದಿಂದ ತಾನು ಆಯ್ದು ಕೊಂಡಿರುವೆನೆಂಬ ಪರಿಚಯವನ್ನು ಪ್ರೇಕ್ಷಕರಿಗೆ ನೀಡಬೇಕು. ಕಥೆಯನ್ನು ಹೇಳುತ್ತಿರುವಾಗ ಆ ಕಾವ್ಯದ ಬೇರೆ ಬೇರೆ ಭಾಗಗಳನ್ನು ಆಗಾಗ ಉದ್ಧರಿಸಿ ಹಾಡಬೇಕು. ಉದಾಹರಣೆಗೆ: ಹರಿಶ್ಚಂದ್ರನ ಕಥೆಯಾಗಿದ್ದರೆ ರಾಘವಾಂಕನ 'ಹರಿಶ್ಚಂದ್ರ ಕಾವ್ಯ'ದ ಪದ್ಯಗಳನ್ನು ಸಂದರ್ಭಾನುಸಾರ ರಾಗವತ್ತಾಗಿ ಹಾಡುವುದು. ವಸಿಷ್ಠ-ವಿಶ್ವಾಮಿತ್ರರ ಸಂಭಾಷಣೆ, ಹರಿಶ್ಚಂದ್ರ-ಅನಾಮಿಕೆಯರ ಸಂಭಾಷಣೆ, ಹರಿಶ್ಚಂದ್ರನ ರಾಜ್ಯ ಸಮರ್ಪಣೆ, ಕಾಶೀ ರಾಜನಲ್ಲಿ ಚಂದ್ರಮತಿ-ರೋಹಿತಾಶ್ವರ ಜೀವನ, ಮಗನನ್ನು ಕಳೆದುಕೊಂಡ ಚಂದ್ರಮತಿಯ ಶೋಕ-ಇಲ್ಲಿ ಕವಿ ಹೇಳುವ 'ಮಂದಾನಿಲ ರಗಳೆ'ಯ ಪದ್ಯಭಾಗ-ಇತ್ಯಾದಿಗಳನ್ನು ಪ್ರೇಕ್ಷಕರ ಎದುರಿನಲ್ಲಿ ಹಾಡುವುದರಿಂದ ಸಾಹಿತ್ಯದ ಪ್ರಸಾರದೊಂದಿಗೆ ಪ್ರಸಿದ್ಧ ಕಾವ್ಯವೊಂದನ್ನು ಜನಪ್ರಿಯ ಗೊಳಿಸಿದಂತಾಗುತ್ತದೆ.

ಅಂತೆಯೇ 'ಚಂದ್ರಹಾಸ'ನ ಕಥೆಯಾಗಿದ್ದರೆ ಅದು ಲಭ್ಯವಾಗುವ ಲಕ್ಷ್ಮೀಶನ ಜೈಮಿನಿ ಭಾರತದ ಪದ್ಯಗಳು, 'ಗಿರಿಜಾ ಕಲ್ಯಾಣ' ಕಥಾಭಾಗವಾಗಿದ್ದರೆ ಹರಿಹರ ಕವಿಯ ಪ್ರೌಢ ಚಂಪೂ ಭಾಗದ ಪದ್ಯಗಳು, 'ಸೀತಾ ಪರಿತ್ಯಾಗ' ಕಥೆಯಾಗಿದ್ದರೆ ಲಕ್ಷ್ಮೀಶನ ಜೈಮಿನಿ ಭಾರತದ ಪದ್ಯಗಳೊಂದಿಗೆ ಕವಿ ಮುದ್ದಣನ 'ರಾಮಾಶ್ವಮೇಧಂ'ನಿಂದ ಆಯ್ದುಹಳೆಗನ್ನಡದ ವಾಕ್ಯಗಳನ್ನು ಉದ್ಧರಿಸುವುದು-ಹೀಗೆ ಕನ್ನಡ ಸಾಹಿತ್ಯದ ವಿವಿಧ ಜನಪ್ರಿಯ ಕಾವ್ಯಗಳನ್ನು ಹರಿದಾಸನಾದವನು ಶ್ರೋತೃಗಳಿಗೆ ಸಂದರ್ಭೋಚಿತವಾಗಿ ಪರಿಚಯಿಸಲು ಪ್ರಯತ್ನಿಸಬೇಕು. ಇಲ್ಲಿ ಹರಿದಾಸನು ಹಾಡುವ ಕಾವ್ಯಭಾಗದ ಪದ್ಯಗಳು ಸಂಗೀತದ ರಾಗಗಳನ್ನಳವಡಿಸಿ ಕೊಂಡು ಗಮಕಮಯವಾಗಿದ್ದರೆ ಪ್ರೇಕ್ಷಕರಿಗೆ ಗಮಕ ಕಲೆಯ ಪರಿಚಯ ಮಾಡಿಕೊಟ್ಟಂತಾಗುತ್ತದೆ. ಇದರ ಮೂಲಕವಾಗಿ ಪದ್ಯಗಳ ಪ್ರಕಾರವಾದ ವಾರ್ಧಿಕ, ಭಾಮಿನಿ, ವೃತ್ತ-ಕಂದಗಳು, ಸಾಂಗತ್ಯ, ತ್ರಿಪದಿ ಮುಂತಾದುವುಗಳನ್ನು ರಾಗವತ್ತಾಗಿ ಹಾಡುವ ಪ್ರಕಾರಗಳನ್ನು ಶ್ರೋತೃಗಳಿಗೆ ಪರಿಚಯಿಸಿದಂತಾಗುತ್ತದೆ. ಇಂತಹ ಸಂದರ್ಭಗಳಲ್ಲಿ ಹರಿದಾಸನು ತಾನು ಯಾವ ಛಂದಸ್ಸಿನ ಪದ್ಯಗಳನ್ನು ಹಾಡುತ್ತಿದ್ದೇನೆಂಬ ವಿವರಣೆಯನ್ನು ಶ್ರೋತೃಗಳಿಗೆ ತಿಳಿಯಹೇಳಿ ಅನಂತರ ಹಾಡುವುದು ಅನಿವಾರ್ಯ. ಇದರಿಂದಾಗಿ ಸಾಹಿತ್ಯ, ಸಂಗೀತ, ಗಮಕ ಮುಂತಾದ ಕಲೆಗಳ ಜ್ಞಾನವನ್ನು ಶ್ರೋತೃಗಳಿಗೆ ನೀಡಿದಂತಾಗುವುದು. (ಮುಂದುವರಿಯುವುದು)

## ಶಿವಬ್ರಾಹ್ಮಣ ಸಂಘ ಕಾಸರಗೋಡು



ನಮ್ಮ ಸಮಾಜದ ಹಲವಾರು ಸದಸ್ಯರು ಸೇರಿ ಹಮ್ಮಿಕೊಂಡ ಸಮೂಹ ಭಜನೆ ಕಾರ್ಯಕ್ರಮ, ನಮ್ಮವರದೇ ಆದ ಕೂಡ್ಲುಶ್ರೀ ಗೋಪಾಲಕೃಷ್ಣ ದೇವಸ್ಥಾನ, ಶಿವಮಂಗಿಲ ಶಿವ ದೇವಸ್ಥಾನ, ವಿಷ್ಣುಮಂಗಿಲ ವಿಷ್ಣುಮೂರ್ತಿ ದೇವಸ್ಥಾನ, ಪೆರ್ಲ ಬಜಕೂಡ್ಲು ಮಹಾಲಿಂಗೇಶ್ವರ ದೇವಸ್ಥಾನಗಳಲ್ಲಿಯೂ, ಮದೂರು ಶ್ರೀ ಮದನಂತೇಶ್ವರ ದೇವಸ್ಥಾನ, ಇನ್ನೂ ಹಲವಾರು ದೇವಸ್ಥಾನ, ಭಜನಾ ಮಂದಿರಗಳಲ್ಲಿಯೂ ವಿಜ್ರಂಭಿಸಿದ ಭಜನಾ ತಂಡ ಮುಂದುವರಿಯುತ್ತಾ ಸಾಗುತ್ತಿದೆ.

ಈಗ ತಿರುಪತಿ ತಿರುಮಲ ದಾಸ ಸಾಹಿತ್ಯ ಪ್ರಾಜೆಕ್ಟ್‌ನ ಪ್ರಥಮ ರಾಷ್ಟ್ರೀಯ ಸಮೂಹ ಭಜನಾ ಕಾರ್ಯಕ್ರಮದಲ್ಲಿ ಬೇರೆ ಬೇರೆ 30 ತಂಡದವರಲ್ಲಿ ಕ್ವಾರ್ಟರ್ ಫೈನಲ್ ಸುತ್ತಿಗೆ ಆಯ್ಕೆಯಾದ ನಮ್ಮ ಸದಸ್ಯರುಗಳು-ಶ್ರೀಮತಿಯವರಾದ-ಕೆ. ಕೆ. ವಿಜಯಲಕ್ಷ್ಮೀ ಶ್ಯಾನುಭೋಗ್, ಕೆ. ಮಾಲತಿ ಜಗದೀಶ್, ಕೆ. ವೀಣಾ ಪ್ರಸನ್ನ ಶ್ಯಾನುಭೋಗ್, ಎ. ಸುಜ್ಞಾನಿ ಸುಬ್ರಾಯ ಶ್ಯಾನುಭೋಗ್, ಕೆ. ಮಮತಾ ಸುದರ್ಶನ್ ಶ್ಯಾನುಭೋಗ್, ಕೆ. ಕೃಪಾ ಗೋಪಾಲಕೃಷ್ಣ ಶ್ಯಾನುಭೋಗ್ ಮತ್ತು ಇತರ ಸದಸ್ಯರು. ಹಾರ್ಮೋನಿಯಂನಲ್ಲಿ ಸಹಕರಿಸಿರುವವರು ಶ್ರೀಯುತ ಕೃಷ್ಣ ಚೇನಕ್ಕೋಡ್, ತಬಲದಲ್ಲಿ ಕೆ. ಪ್ರಸನ್ನ ಶ್ಯಾನುಭೋಗ್.

ವರದಿ: ಎಂ. ರಾಜೇಶ್ವರಿ
ಮಹಿಳಾ ಘಟಕದ ಉಪಾಧ್ಯಕ್ಷೆ

## ಇಂದ್ರಾಳಿ ಪ್ರೌಢಶಾಲೆಗೆ ಸಮಗ್ರ ಪ್ರಶಸ್ತಿ

ಡಾ। ಟಿ.ಎಂ.ಎ.ಪೈ ಪಾಲಿಟೆಕ್ನಿಕ್ ಮಣಿಪಾಲ ಇದರ ಬೆಳ್ಳಿ ಹಬ್ಬದ ಪ್ರಯುಕ್ತ ನಡೆದ ಅಂತರ್ ಜಿಲ್ಲಾ ಪ್ರೌಢಶಾಲಾ ಮಕ್ಕಳ 'ಉಮಂಗ್' ಸ್ಪರ್ಧಾ ಕಾರ್ಯಕ್ರಮದಲ್ಲಿ ಇಂದ್ರಾಳಿ ಆಂಗ್ಲ ಮಾಧ್ಯಮ ಪ್ರೌಢಶಾಲೆಯು ಮುಖ್ಯ ಶಿಕ್ಷಕ ಶ್ರೀ ವೈ. ಭುವನೇಂದ್ರ ರಾವ್ ಇವರ ಮಾರ್ಗದರ್ಶನದಲ್ಲಿ ಸಮಗ್ರ ಪ್ರಶಸ್ತಿಯನ್ನು ಪಡೆದುಕೊಂಡಿದೆ.

ಶ್ರೀ ವೈ. ಭುವನೇಂದ್ರ ರಾವ್ ಇವರು ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ, ಕುಂಜಿಬೆಟ್ಟು, ಉಡುಪಿಯ ನಿಕಟಪೂರ್ವ ಕಾರ್ಯದರ್ಶಿಯಾಗಿದ್ದರು.

## ಹಿರಿಯ ನಾಗರಿಕರ ಮಹಾಮಂಡಳಿಗೆ ಸಿ.ಎಸ್.ರಾವ್ ಆಯ್ಕೆ



ಹಿರಿಯ ನಾಗರಿಕರ ಸಂಘ ಉಡುಪಿ ಘಟಕದ ಕಾರ್ಯದರ್ಶಿ ಶ್ರೀ ಸಿ. ಎಸ್.ರಾವ್ ಇವರು ಅಖಿಲ ಭಾರತ ಹಿರಿಯ ನಾಗರಿಕರ ಮಹಾಮಂಡಳಿಯ ಜಂಟಿ ಕಾರ್ಯದರ್ಶಿಯಾಗಿ ಆಯ್ಕೆಯಾಗಿದ್ದಾರೆ. ಉಡುಪಿ ಸಂಸ್ಥೆ ಮಹಾಮಂಡಳಿಯೊಂದಿಗೆ ಸಂಯೋಜನೆಗೊಂಡಿದ್ದು ನವಿ ಮುಂಬಯಿ ನೆರುಳ್‌ನಲ್ಲಿ ಜರಗಿದ ಮಹಾಸಭೆಯಲ್ಲಿ ಹೊಸ ಕಾರ್ಯಕಾರಿ ಸಮಿತಿ ರಚಿಸಲಾಯಿತು. ದಕ್ಷಿಣ ಭಾರತದಿಂದ ಆಯ್ಕೆಯಾದ ಕೆಲವೇ ಕೆಲವು ಪದಾಧಿಕಾರಿಗಳಲ್ಲಿ ರಾವ್ ಒಬ್ಬರಾಗಿದ್ದಾರೆ. ಕಾರ್ಪೋರೇಶನ್ ಬ್ಯಾಂಕಿನ ನಿವೃತ್ತ ಡಿ.ಜಿ.ಎಮ್. ಶ್ರೀ ಸಿ. ಎಸ್. ರಾವ್‌ರವರು ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಕುಂಜಿಬೆಟ್ಟು ಉಡುಪಿಯ ಅಧ್ಯಕ್ಷರಾಗಿಯೂ, ಶ್ರೀಶಾರದಾ ಕೋ-ಓಪರೇಟಿವ್ ಕ್ರೆಡಿಟ್ ಸೊಸೈಟಿಯ ಉಪಾಧ್ಯಕ್ಷರಾಗಿಯೂ ಕಾರ್ಯ ನಿರ್ವಹಿಸುತ್ತಿದ್ದಾರೆ.

## ದಾಮೋದರ ಶಾಸ್ತ್ರಿ ಪ್ರತಿಷ್ಠಾನ ಕುಳ್ಯಾ : ವಿದ್ಯಾರ್ಥಿ ವೇತನ ಕೊಡುಗೆ



ದಿನಾಂಕ 24-10-2010 ಭಾನುವಾರದಂದು ಶ್ರೀ ಸುಬ್ರಹ್ಮಣ್ಯ ಸಭಾ ಬಿಜೈ, ಮಂಗಳೂರು ಇಲ್ಲಿ ನವರಾತ್ರಿ ಪ್ರಯುಕ್ತ ಜರಗಿದ ನಾಡಹಬ್ಬದಂದು ದಿ। ಕೆ. ಭಾಗೀರಥಿ ದಾಮೋದರ ಶಾಸ್ತ್ರಿ ಪ್ರತಿಷ್ಠಾನ ಕುಳ್ಯಾ, ಮಂಗಳೂರು ಇದರ ವತಿಯಿಂದ 2009-10ರ ಶೈಕ್ಷಣಿಕ ವರ್ಷದ ಎಸ್.ಎಸ್.ಎಲ್.ಸಿ./ಪಿ.ಯು.ಸಿ.ಯಲ್ಲಿ ವಿಶಿಷ್ಟ ಶ್ರೇಣಿಯಲ್ಲಿ ತೇರ್ಗಡೆಯಾದ ದ.ಕ., ಉಡುಪಿ ಜಿಲ್ಲೆಯ ಸ್ಥಾನಿಕ ಬ್ರಾಹ್ಮಣ ಸಮಾಜದ 22 ವಿದ್ಯಾರ್ಥಿ/ವಿದ್ಯಾರ್ಥಿನಿಯರನ್ನು ಹಾಗೂ ಪಠ್ಯೇತರ ವಿಷಯಗಳಲ್ಲಿ (ನೃತ್ಯ, ಸಂಗೀತ ಇತ್ಯಾದಿ) ಪ್ರಾವಿಣ್ಯತೆಯನ್ನು ಹೊಂದಿದ ಓರ್ವ ವಿದ್ಯಾರ್ಥಿಯನ್ನು ಪ್ರತಿಷ್ಠಾನದ ಸ್ಥಾಪಕರಾದ ಕೆ. ಸೌಭದ್ರಾ, ಸದಾಶಿವ ಶಾಸ್ತ್ರಿ ದಂಪತಿಗಳು ಫಲ, ಪುಷ್ಪ, ಸ್ಮರಣಿಕೆ, ಹಿರಿಯರ ಆಶೀರ್ವಾದ ರೂಪವಾಗಿ ಗೌರವಧನ, ಪೋಷಕರಿಗೆ ಪುಷ್ಪ ನೀಡುವುದರ ಮೂಲಕ ಅಭಿನಂದಿಸಿದರು.

**ದೇವಿಕೃಪಾ ಏಜೆನ್ಸೀಸ್, ನಂದಿಕೂರು**
ಫೋನ್ : 2556536 (R), 2555466 (0)
ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.
ಪ್ರೊ। ಎಸ್. ಜನಾರ್ದನ್ ರಾವ್
ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು

**Rao's 'ಮಾತೃಛಾಯಾ'ರವರ**
ಉಡುಪಿ ವಿಶಿಷ್ಟ ರುಚಿಯುಳ್ಳ
ಸಾರಿನ ಹಾಗೂ ಸಾಂಬಾರ್ ಮಸಾಲೆ, ಅಪ್ಪಿಮಿಡಿ ಹಾಗೂ ಮಿಡಿ ಉಪ್ಪಿನಕಾಯಿ ಹಪ್ಪಳ ಹಾಗೂ ಸೆಂಡಿಗೆಗಳು, ಶುದ ದನದ ತುಪ್ಪ ಹಾಗೂ ಜೇನು ತುಪ್ಪ
-: ಮೊದಲಾದ ನಿತ್ಯೋಪಯೋಗಿ ವಸ್ತುಗಳಿಗೆ ಸಂದರ್ಶಿಸಿರಿ :-
**ಭಾರತ್ ಸ್ಟೋರ್ಸ್**
ರಥಬೀದಿ, ಉಡುಪಿ - 576 101. ಫೋನ್ : 2522444

# ಪಂಚೇಂದ್ರಿಯಂಗಳೊಳ್ ನಾಲ್ಕಧಮ ಒಂದಧಿಕವೆ?

- ಬೈಲಕೆರೆ ನಾರಾಯಣ

ಸತ್ಯ ಹರಿಶ್ಚಂದ್ರನಿಗೆ, ವನ್ಯಮೃಗಗಳ ಭೇಟೆಯಾಡುತ್ತಾ ರಾಜರ್ಷಿ ವಿಶ್ವಾಮಿತ್ರರ ಆಶ್ರಮದ ಬಳಿ ಸಾರಿದಾಗ, ಅವರಿಂದ ಸೃಷ್ಟಿಸಲ್ಪಟ್ಟ ಕನ್ಯೆಯರಿಂದ ಎದುರಾದ ಪ್ರಶ್ನೆ ಇದು. ಶಬ್ದ, ರೂಪ, ರಸ, ಗಂಧ, ಸ್ಪರ್ಶ, ಜ್ಞಾನಗಳನ್ನು ಕೊಡತಕ್ಕ ಪಂಚೇಂದ್ರಿಯಗಳಲ್ಲಿ ಸ್ಪರ್ಶೇಂದ್ರಿಯವು ಉಳಿದವುಗಳಿಗಿಂತ ಶ್ರೇಷ್ಠವಾದುದೇ ಎಂದು ಪ್ರಶ್ನಿಸುತ್ತಾರೆ.

ವಿಶಾಲ ಪ್ರಪಂಚದಲ್ಲಿ ವಾಸಿಸುತ್ತಿರುವ ಮನುಷ್ಯ, ತಾನಿರುವ ಪ್ರಪಂಚದಲ್ಲಿ ಏನೇನಿದೆ ಎಂದು ತಿಳಿದುಕೊಳ್ಳಲು ಈ ಐದು ಇಂದ್ರಿಯ ಶಕ್ತಿಗಳು ಅಗತ್ಯ. ಸುತ್ತಣ ಪ್ರಪಂಚದಲ್ಲಿ ಬೆಳೆಯುತ್ತಿರುವ ಗಿಡ, ಮರ, ಬಳ್ಳಿಗಳ ಸೊಬಗನ್ನು, ಪುಷ್ಪರಾಶಿಗಳ ಅಂದವನ್ನು, ಪ್ರಾಣಿಪಕ್ಷಿಗಳ ಚಲನವಲನವನ್ನು, ಅವುಗಳ ರೂಪುರೇಷೆಗಳನ್ನು ತಿಳಿದುಕೊಳ್ಳಲು ದೃಶ್ಯ ಜ್ಞಾನವನ್ನು ಕೊಡತಕ್ಕ ಕಣ್ಣುಗಳು ಅಗತ್ಯ.

ಎಳೆಯ ಮಕ್ಕಳ ಮುಗ್ಧ ಮುಖವನ್ನು, ಬೆಳೆಯುತ್ತಿರುವ ಕನ್ಯಾಮಣಿಗಳ ಹದಿಹರೆಯದ ಸೊಬಗನ್ನು, ಯೌವನಕ್ಕೆ ಕಾಲಿಡುತ್ತಿರುವ ಯುವಕರ ಅಂಗಸೌಷ್ಠವವನ್ನು, ಹಿರಿಯರ ಮುಖದ ಗಾಂಭೀರ್ಯವನ್ನು, ಮುಪ್ಪಿನ ದಿನಗಳ ಮುದುಕರ ನೆರಿಬಿದ್ದ ಶರೀರವನ್ನು ಪರಿಚಯಿಸುವುದು ನಮ್ಮ ನಯನದ್ವಯಗಳೇ.

ದೃಷ್ಟಿಶೂನ್ಯನಾದವನು ಈ ಯಾವ ಸೊಬಗನ್ನು ಆಸ್ವಾದಿಸಲಾರ. ಕಣ್ಣೆದುರು ಬರೀ ಕತ್ತಲು. ಅವನ ಚಲನವಲನಗಳಿಗೂ ಬೇರೆಯವರ ಸಹಾಯದ ಅವಶ್ಯಕತೆ ಯಿರುತ್ತದೆ. ಭೂಮ್ಯಾಕಾಶಗಳ ನಡುವೆ ಸ್ವತಂತ್ರವಾಗಿ ಚಲಿಸುವುದುಕನಸಿನ ಮಾತೇ ಸರಿ. ಆದರೂ ಕುರುಡನು ಪರರ ಸಹಾಯದಿಂದ ಜೀವಿಸಬಲ್ಲ, ಉಳಿದ ಇಂದ್ರಿಯಗಳ ಸಹಾಯದಿಂದ ವಸ್ತುಗಳ ಗುಣವನ್ನು ತಿಳಿಯಬಲ್ಲ, ರಸಾಸ್ವಾದನೆ ಮಾಡಬಲ್ಲ ಕುರುಡರೂ ಪಾಂಡಿತ್ಯ ಪಡೆಯಬಲ್ಲರು.

ಕಣ್ಣಿಗೆ ಕಾಣದಷ್ಟು ದೂರದಲ್ಲಿರುವ ವಸ್ತು ಅಥವಾ ಕಣ್ಣಿಗೆ ಗೋಚರವಾಗುವಷ್ಟು ಬೆಳಕಿಲ್ಲದ ಸಮಯದಲ್ಲಿ ಕಿವಿಗಳ ಮೂಲಕ ಗ್ರಹಿಸುವ ಶಬ್ದದಿಂದ ಸುತ್ತಮುತ್ತ ಏನಾಗುತ್ತಿದೆ ಎಂದು ತಿಳಿಯಲು ಸಾಧ್ಯವಿದೆ. ದೂರದಲ್ಲಿ ಸಿಡಿಯುವ ದುರುಸು ಬಾಣಗಳ ಶಬ್ದದಿಂದ ಅದೇನೋ ಸಂತೋಷ ಸಂಭ್ರಮಗಳ ಕಾರ್ಯಕ್ರಮ ನಡೆಯುತ್ತಿದೆಯೆಂದೂ, ಸಿಡಿಲಬ್ಬರದಿಂದ ಮೋಡಗಳು ಜಮೆಯಾಗಿ ಮಳೆಬರುತ್ತದೆಂದೂ ಭಾವಿಸಬಹುದು. ಕತ್ತಲಲ್ಲಿ ಕುಳಿತು ಹಾಡುತ್ತಿರುವವರ ಸ್ವರದಿಂದ ಉಲ್ಲಸಿತರಾಗಬಹುದು. ದೃಷ್ಟಿಗೋಚರ ವಲ್ಲದುದನ್ನು ಶಬ್ದ ಗ್ರಹಣದಿಂದ ತಿಳಿಯ ಬಹುದು.

ಕಿವಿಕಿವುಡಾಗಿ ಶಬ್ದಗ್ರಹಣ ಶಕ್ತಿ ಇಲ್ಲದವನು ತನ್ನ ಕಣ್ಣುಗಳಿಂದ ಪ್ರಪಂಚವನ್ನು ನೋಡಿ ಸಂತೋಷಪಡಬಹುದು. ನಾಸಿಕದಿಂದ ವಸ್ತುಗಳ ವಾಸನೆಯನ್ನು ಗ್ರಹಿಸಬಹುದು. ಸ್ಪರ್ಶ ಜ್ಞಾನದಿಂದ ಶೀತೋಷ್ಣಗಳನ್ನಾಗಲೀ, ನಯ ನಾಜೂಕುಗಳನ್ನಾಗಲೀ ತಿಳಿದುಕೊಳ್ಳಲು ಸಾಧ್ಯವಿದೆ.

ಮೂಗಿನ ಎರಡು ಹೊಳ್ಳೆಗಳ ಮೂಲಕ ಉಸಿರಾಡುತ್ತೇವೆ. ಆ ಸಮಯದಲ್ಲಿ ಬಳಿಯಿರುವ ವಸ್ತುವಿನ ಸುಗಂಧ ಪರಿಮಳ ವನ್ನಾಗಲೀ, ದುರ್ಗಂಧ ಸೂಸುವ ವಾಸನೆಯನ್ನಾಗಲೀ ತಿಳಿಯುತ್ತೇವೆ. ಇದು ಕೂಡಾ ನಮ್ಮೆದುರಿಗೆ ಹಾಗೂ ಸುತ್ತಮುತ್ತ ಇರುವ ವಸ್ತುಗಳ ಪರಿಚಯ ಮಾಡಿಕೊಳ್ಳಲು ಸಹಾಯ ಮಾಡುತ್ತದೆ. ಈ ಇಂದ್ರಿಯವು ಸರಿಯಾಗಿ ಕೆಲಸ ಮಾಡದಿದ್ದರೆ, ವಸ್ತುವಿನ ಗುಣ ವಿಶೇಷಗಳನ್ನು ಪೂರ್ತಿಯಾಗಿ ತಿಳಿಯಲಿಲ್ಲವೆಂಬುದು ಸತ್ಯವಿಚಾರವಾದರೂ, ಉಳಿದ ಇಂದ್ರಿಯಗಳ ಮೂಲಕ ವಸ್ತುವಿನ ಇರುವನ್ನು ತಿಳಿಯಲು ಸಾಧ್ಯವಾಗುತ್ತದೆ.

ಇಡೀ ಮೈಯನ್ನು ಆವರಿಸಿರುವ ಚರ್ಮ ಸ್ಪರ್ಶ ಜ್ಞಾನವನ್ನು ಕೊಡುವಂತಹದಾಗಿದೆ. ಈ ಇಂದ್ರಿಯವು ಸರಿಯಾಗಿ ತಿಳುವಳಿಕೆಯನ್ನು ಕೊಡದಿದ್ದರೆ, ಇಡೀ ದೇಹಕ್ಕೆ ಅಪಾಯ ಕಟ್ಟಿಟ್ಟದ್ದೆ. ಶೀತೋಷ್ಣಗಳ ತಿಳುವಳಿಕೆ ಇಲ್ಲದೆ ಹೋದಾಗ ಅಂತಹ ವಸ್ತುಗಳ ಸ್ಪರ್ಶದಿಂದ ದೇಹದ ಉಳಿದ ಭಾಗಗಳಿಗೆ ಹಾನಿಯಾಗ ಬಹುದು. ಆದರೆ, ಇದನ್ನು ನಮ್ಮ ನೋಡುವ ಹಾಗೂ ಕೇಳುವ ಶಕ್ತಿಗಳಿಂದಾಗಿ ಉಳಿದವರು ಈ ವಿಚಾರದಲ್ಲಿ ಹೇಗೆ ವ್ಯವಹರಿಸುತ್ತಾರೆಂದು ತಿಳಿದು ನಾವು ಜಾಣತನದಿಂದ ವರ್ತಿಸ ಬಹುದು.

ಇನ್ನುಳಿದಿರುವುದು ರಸಾಸ್ವಾದನೆ ಮಾಡತಕ್ಕ ನಾಲಗೆ. ನಮ್ಮ ಎಲ್ಲಾ ಇಂದ್ರಿಯಗಳು ರುಂಡಭಾಗದಲ್ಲಿ ಇದ್ದರೂ, ಎಲ್ಲರ ಕಣ್ಣಿಗೆ ಬೀಳುವಂತೆ ಇದ್ದರೂ, ಈ ನಾಲಗೆ ಮಾತ್ರ ಬಾಯಿಯೊಳಗಿದ್ದುಕೊಂಡು, ಯಾವಾಗಲೂ ಕಣ್ಣಿಗೆ ಕಾಣಿಸುವಂತಿಲ್ಲ. ಬಾಯಿ ತೆರೆದರೆ ಮಾತ್ರ ಬೇರೆಯವರ ಕಣ್ಣಿಗೆ ಬೀಳುತ್ತದೆ. ಹಾಗೆಯೇ ಇದರ ಉಪಯೋಗಕ್ಕೆ ಕೂಡಾ ಬಾಯಿ ತೆರೆಯಲೇ ಬೇಕು.

ಷಡ್ರಸೋಪೇತವಾದ ಭೋಜನವನ್ನು ಸವಿಯುವಾಗ, ವಿವಿಧ ಖಾದ್ಯಗಳ ರುಚಿ ಯನ್ನು ತಿಳಿಸುವ ಕೆಲಸ ನಾಲಗೆಯದ್ದಾಗಿ ರುತ್ತದೆ. ಈ ಕೆಲಸವು ಪಂಚೇಂದ್ರಿಯಗಳ ಕೆಲಸದ ಒಂದು ಅಂಶವಾಗಿರುತ್ತದೆ. ಆದರೆ ಈ ನಾಲಗೆಗೆ ಇನ್ನೊಂದು ಕೆಲಸವಿರುತ್ತದೆ. ಅದುವೇ ಮಾತನಾಡುವ ಕೆಲಸ.

ನಮ್ಮ ಉದರಂಭರಣಕ್ಕೆ ಅವಶ್ಯವಾದ ಸಾತ್ವಿಕ ಆಹಾರವನ್ನು ಇತಿಮಿತಿಯೊಳಗೆ ಬಾಯಿಯೊಳಗಿಟ್ಟು ಈ ನಾಲಗೆಯ ಮುಖಾಂತರ ರಸಾಸ್ವಾದನೆ ಮಾಡಿ ಜಠರಕ್ಕೆ ಇಳಿಸಿದ ನಂತರ ಅದರ ಸಾರವನ್ನು ಹೀರಿಕೊಂಡು ಈ ದೇಹ ತನ್ನ ಕೆಲಸ ಕಾರ್ಯಗಳನ್ನು ಮಾಡಲು ಸಮರ್ಥ ವಾಗುವುದು. ನಾಲಗೆಯ ದಾಸನಾಗಿ ವಿವಿಧ ರೀತಿಯ ಆಹಾರಗಳನ್ನು ರಸಾಸ್ವಾದನೆಯ ಬಯಕೆಯಿಂದ ಬಾಯಿಯೊಳಗಿಟ್ಟರೆ ಅದುವೇ ದೇಹದ ಸ್ವಾಸ್ಥ್ಯ ಕೆಡಿಸಲು ಮೂಲ ಕಾರಣವಾಗಬಹುದು. ನಾವು ಬಾಯಿತೆರೆದು ಒಳ ಸೇರಿಸುವ ಆಹಾರವನ್ನು ಸರಿಯಾಗಿ ನಿಯಂತ್ರಿಸಿಕೊಂಡಿದ್ದರೆ ದೇಹಾರೋಗ್ಯವು ಉತ್ತಮವಾಗಿದ್ದು ಸುಖ ಜೀವನಕ್ಕೆ ಅನುಕೂಲವಾಗಬಹುದು. ತೆರೆದ ಬಾಯಿ ಯೊಳಗೆ ಅನಗತ್ಯವಾದ ಆಹಾರವನ್ನು ತುರುಕಿಕೊಂಡು ಮಿತಿ ಮೀರಿ ಸೇವಿಸಿದರೆ ಅನಾರೋಗ್ಯ ಕಟ್ಟಿಟ್ಟಬುತ್ತಿ. ಆದುದರಿಂದ ನಮ್ಮ ಶರೀರದ ಸ್ವಾಸ್ಥ್ಯ ಕಾಪಾಡಿಕೊಳ್ಳಲು ತೆರೆದ ಬಾಯಿಯಿಂದ ಒಳಸೇರುವ ಆಹಾರವೇ ಸರಿಯಾದ ಸಾಧನ.

ನಾಲಗೆಯನ್ನು ಉಪಯೋಗಿಸಿ ಆಡುವ ಮಾತು ಇನ್ನೊಬ್ಬರಿಗೆ ಕೇಳಬೇಕಾದರೂ ಬಾಯಿ ತೆರೆಯುವುದು ಅಗತ್ಯ. ಬಾಯಿಯಿಂದ ಹೊರಬರುವ ಮಾತು ನಿಯಂತ್ರಿತವಾಗಿದ್ದರೆ, ಕೇಳುಗರಿಗೂ ತುಂಬಾ ಹಿತವಾಗಿರುತ್ತದೆ. ಹಾಗೂ ಸಂತೋಷಪ್ರದವಾಗಿರುತ್ತದೆ. ಇದಕ್ಕೆ ವ್ಯತಿರಿಕ್ತವಾಗಿ ಮನಸ್ಸನ್ನು ಹಿಡಿತದಲ್ಲಿ ಇಟ್ಟುಕೊಳ್ಳದೆ ಆಡುವ ಮಾತುಗಳು ಶತ್ರುಗಳ ಸೃಷ್ಟಿಗೆ ಕಾರಣವಾಗಬಲ್ಲುದು. ಪುರಾಣಕತೆ ಗಳಲ್ಲಿ ಅದೆಷ್ಟೋ ಮಂದಿಯ ಬಾಯಿಯಿಂದ ಹೊರಬಂದ ಪ್ರತಿಜ್ಞೆಗಳಿಂದ ಆದ ಅನಾಹುತ ಗಳನ್ನು ನಾವು ತಿಳಿದಿರುವವಷ್ಟೆ. ಬಾಯಿಯಿಂದ ಹೊರಬರುವ ಮಾತಿನಿಂದಲೇ ಮನಸ್ಸಿನ ನೆಮ್ಮದಿ ಉಳಿಸಿಕೊಳ್ಳಲೂ ಬಹುದು, ಕೆಡಿಸಿಕೊಳ್ಳಲೂ ಬಹುದು.

ಸುಖಮಯ ಜೀವನಕ್ಕೆ ಮಾನವನಿಗೆ ದೇಹಕ್ಕೆ ಆರೋಗ್ಯ ಹಾಗೂ ಮನಸ್ಸಿಗೆ ನೆಮ್ಮದಿ ಅತೀ ಮುಖ್ಯ. ಬಾಯಿಯಿಂದ ಒಳ ಸೇರುವ ಆಹಾರ ಹಾಗೂ ಹೊರಬರುವ ಮಾತುಗಳೇ ಮಾನವನ ಬದುಕಿನ ಸ್ಥಿತಿಯನ್ನು ನಿರ್ಧರಿಸುವುದಾಗಿದೆ. ಇದರಲ್ಲಿ ನಾಲಗೆಯ ಪಾತ್ರವೂ ಮಹತ್ವದ್ದಾದರೂ, ಬಾಯಿ ತೆರೆಯುವ ಕ್ರಿಯೆ ಸಚ್ಚಿಂತನೆ ಮತ್ತು ಸದ್ಭಾವನೆ ಗಳಿಂದ ಕೂಡಿದ್ದರೆ, ಬದುಕು ಬಂಗಾರ ವಾಗುವುದು. ಇಲ್ಲವಾದರೆ ಯಾತನಾಮಯ ವಾಗಲೂ ಬಹುದು. ಬಾಯಿ ತೆರೆಯದೆ ನಾಲಗೆ ಕೆಲಸ ಮಾಡಲಾಗದು.

ಪಂಚೇಂದ್ರಿಯಗಳಲ್ಲಿ ಬಾಯಿ ಸೇರಿಕೊಂಡಿ ರದಿದ್ದರೂ ಇದರ ಪಾತ್ರವೇ ಮಾನವನ ಜೀವನದಲ್ಲಿ ಶ್ರೇಷ್ಠವಾದುದಲ್ಲವೇ?

ನನ್ನ ನೆನಪಿನಂಗಳದಿಂದ

# ಊರ ಜಾತ್ರೆ-ನನ್ನ ಪರೀಕ್ಷೆ...

- ಗೋಪಾಲಕೃಷ್ಣ ಕೋಲ್ಪೆ, ಕಡಬ

ನನ್ನ ಶಾಲಾ ದಿನಗಳಲ್ಲಿ ನಡೆದ ಘಟನೆ. ಇಸವಿ 1957-58, ಮೆಟ್ರಿಕ್ ಪರೀಕ್ಷೆಗೆ ಶುಲ್ಕ ಕಟ್ಟಲು ರೂಪಾಯಿ ಆರನ್ನು ನನ್ನ ತಂದೆಯವರು ಕೊಟ್ಟಿದ್ದರು. ಅದು ಎರಡು ದಿನದೊಳಗೆ ಪಾವತಿಯಾಗಬೇಕಿತ್ತು. ಈ ಮಧ್ಯೆ ಊರ ದೇವರ ಜಾತ್ರೆಗೆ ಸ್ನೇಹಿತರೊಂದಿಗೆ ಹೋಗಿದ್ದೆ. ಪರೀಕ್ಷೆ ಹತ್ತಿರ ಬರುವಾಗ ಭಗವಂತನ ನೆನಪಾಗುವುದು ಸಹಜ! ಅಲ್ಲೊಂದು ಜನರ ಸಣ್ಣ ಗುಂಪು ಸೇರಿತ್ತು. ಇಣುಕಿದಾಗ, ಒಬ್ಬ ಸಾಬಿ ಚರ್ಮದ ಬೆಲ್ಟನ್ನು ಸುತ್ತಿ ಅದರ ಮಧ್ಯೆ ಕಡ್ಡಿಯೊಂದನ್ನು ತುರುಕಿಸಿ, ಬೆಲ್ಟ್ ಎಳೆಯುವಾಗ ಕಡ್ಡಿ ಸಿಕ್ಕಿಕೊಂಡರೆ, ಕಟ್ಟಿದ ಹಣಕ್ಕೆ ದುಪ್ಪಟ್ಟು ನೀಡುವುದಾಗಿ ಹೇಳುತ್ತಿದ್ದ. ಒಂದಿಬ್ಬರು ಆ ಸಾಹಸ ಮಾಡಿ ಹಣ ಪಡೆಯುವುದರಲ್ಲಿ ಯಶಸ್ವಿಯಾದರು. ಪರೀಕ್ಷೆ ಶುಲ್ಕದ ಹಣ ನನ್ನ ಕಿಸೆಯಲ್ಲಿದ್ದು ಸ್ನೇಹಿತನ ಒತ್ತಾಯದ ಮೇರೆಗೆ ಒಂದು ರೂಪಾಯಿ ಆಟದಲ್ಲಿ ತೊಡಗಿಸಿದೆ. ಅಡ್ಡಾದಿಡ್ಡಿ ಸುತ್ತಿದ ಬೆಲ್ಟಿನೊಳಗೆ ಕಡ್ಡಿ ತೂರಿಸಿದೆ. ಸರಿಯಾಗಿ ನನ್ನ ಕಡ್ಡಿ ಸಿಕ್ಕಿಕೊಂಡು ದುಪ್ಪಟ್ಟು ಹಣ ಸಿಕ್ಕಿತು. ಈ ಹುಮ್ಮಸ್ಸಿನಿಂದ ಎರಡು ರೂಪಾಯಿ ತೊಡಗಿಸಿ ನಾಲ್ಕು ರೂಪಾಯಿ ಪಡೆದೆ. ದುರಾಸೆ ಜಾಸ್ತಿಯಾಗಿ ರೂ.ನಾಲ್ಕು ಕೊಟ್ಟೆ, ಕಡ್ಡಿ ಸಿಕ್ಕಿಕೊಳ್ಳಲಿಲ್ಲ, ಹಣ ಕಳಕೊಂಡೆ. ಸ್ನೇಹಿತರ ಒತ್ತಾಯದಿಂದ ಪುನಃ ಕಟ್ಟಲು ಶುರುಮಾಡಿದೆ. ಅಂತೂ-ಇಂತೂ ಪರೀಕ್ಷೆಗೆ ಕಟ್ಟುವ ಹಣ ಖಾಲಿಯಾಯ್ತು. ಅಲ್ಲಿ ನೆರೆದವರಲ್ಲಿ ಹೆಚ್ಚಿನವರು ಆ ಆಟದ ರೂವಾರಿ ಸಾಬಿಯ ಆಪ್ತರೆಂದು ತಿಳಿಯಿತು. ನಾನು ಮೋಸ ಹೋಗಿದ್ದೆ. ಬೆವತು ಬಿಟ್ಟೆ! ಕಾರಣ, ಈ ವಿಷಯ ನನ್ನ ಪಿತೃವರ್ಯರಿಗೆ ಗೊತ್ತಾದರೆ, ಅವರ ಚಾಟಿ ಏಟಿನ ರುಚಿ ನೆನೆದು ಕಂಗಾಲಾದೆ. ಈಗ ದೇವಾಲಯಕ್ಕೆ ಬಂದ ಉದ್ದೇಶ ನೆನಪಾಗಿ, ಭಗವಂತನ ಸನ್ನಿಧಿಗೆ ಓಡಿಹೋಗಿ ಅಡ್ಡಬಿದ್ದು, ನನ್ನನ್ನು ಬಚಾವು ಮಾಡಲು ಕೇಳಿಕೊಂಡೆ. ಅಲ್ಲದೆ, ನನ್ನ ಜೀವನ ಪರ್ಯಂತ ಈ ರೀತಿಯ ಸಟ್ಟಾ-ಬಾಜಿ ಆಟಗಳಲ್ಲಿ ಹಣ ತೊಡಗಿಸಲಾರೆನೆಂದು ಪ್ರಮಾಣ ಮಾಡಿದೆ. ಪರೀಕ್ಷಾ ಶುಲ್ಕಕ್ಕೆ ನನ್ನ ಮಾತಾಶ್ರೀಯವರ ಮೊರೆಹೋಗಿ, ವಿಷಯ ತಿಳಿಸಿ ಕಾಡಿ-ಬೇಡಿ ಹಣ ವಸೂಲು ಮಾಡಿದೆ.

ಇಂತಹ ಅನುಭವಗಳು ಸುಖಮಯ ಜೀವನಕ್ಕೆ ಪಾಠವಾಗಬಲ್ಲದೆಂದು ನನ್ನ ಅನಿಸಿಕೆ. ಈ ದಿಸೆಯಲ್ಲಿ, ಇಂದಿನ ಯುವ ಪೀಳಿಗೆಗೆ ಮಾತಾ-ಪಿತೃ-ಗುರುಹಿರಿಯರ ಮಾರ್ಗ ದರ್ಶನ ಅತ್ಯಗತ್ಯ. ಉತ್ತಮ ಸ್ನೇಹಿತರ ಒಡನಾಟ ಇನ್ನೂ ಅಗತ್ಯ.

# ಪುತ್ತೂರು ಶಿವಬ್ರಾಹ್ಮಣ ಸ್ಥಾನಿಕ ಸಮಾಜ ಸೇವಾ ಸಂಘ-ಮಹಾಸಭೆ

ಶಿವಬ್ರಾಹ್ಮಣ (ಸ್ಥಾನಿಕ) ಸೇವಾ ಸಂಘ (ರಿ.), ಪುತ್ತೂರು ಇದರ ಮಹಾಸಭೆಯು ತಾ.03-10-2010ರಂದು ನಡೆದು ಮುಂದಿನ ಮೂರು ವರ್ಷಗಳಿಗೆ ಆಡಳಿತ ಮಂಡಳಿಯ ಸದಸ್ಯರ ಆಯ್ಕೆ ನಡೆಯಿತು.

ಸಂಘದ ಅಧ್ಯಕ್ಷರು-ಶ್ರೀ ಯನ್. ಕೆ. ಜಗನ್ನಿವಾಸ ರಾವ್, ಮುರನಿವೇಶನದ ಅಧ್ಯಕ್ಷರು-ಎಂ.ಎಸ್.ರಘುನಾಥ ರಾವ್, ಕಲ್ಲಾರೆ ನಿವೇಶನದ ಅಧ್ಯಕ್ಷರು-ಟಿ.ರಮಾನಂದ ರಾವ್, ಕೋಶಾಧಿ ಕಾರಿ-ಎನ್.ಎಸ್.ನಟರಾಜ, ಉಪಾಧ್ಯಕ್ಷರು-ಎಂ.ಗಂಗಾಧರ ರಾವ್, ಕಾರ್ಯದರ್ಶಿ-ಕೆ. ಯೋಗೀಶ್ ರಾವ್,

ಕರುಣಾಕರ ಬೆಳ್ಳೆ, ರಾಮಕೃಷ್ಣ ಪೆರುವಾಜೆ, ಅರುಣಕುಮಾರ್ ಜೆಡೆಮನೆ, ಪುವೆಂದೂರು ಅನಂತೇಶ್ವರಯ್ಯ, ಎಸ್.ಬಿ.ಶ್ರೀಧರ ರಾವ್, ಟಿ. ಅಣ್ಣಪ್ಪಯ್ಯ ಹೀಗೆ ಒಟ್ಟು ಹನ್ನೆರಡು ಸದಸ್ಯರು ಆಡಳಿತ ಮಂಡಳಿಯ ಸದಸ್ಯರಾಗಿ ಆಯ್ಕೆಯಾಗಿರುತ್ತಾರೆ.

ವಿಶೇಷ ಆಹ್ವಾನಿತರು-ಟಿ.ಲಕ್ಷ್ಮೀನಾರಾಯಣರಾವ್, ರಾಜೇಶ್ ಎಂ.ಆರ್., ಟಿ. ಕೃಷ್ಣಾನಂದ ರಾವ್. ಆ ದಿನ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ನೀಡಲಾಯ್ತು.

# ನಿಧನ

### ಶ್ರೀಮತಿ ಉಮಾವತಿ

ಹೇರೂರಿನಲ್ಲಿರುವ ಶ್ರೀ ಎಚ್. ಶಂಕರ ನಾರಾಯಣ ರಾವ್ ಇವರ ಧರ್ಮಪತ್ನಿ ಶ್ರೀಮತಿ ಉಮಾವತಿ ಇವರು ತಾ.04-11-2010ರಂದು ಅಲ್ಪಕಾಲದ ಅಸೌಖ್ಯದಿಂದ ನಿಧನರಾಗಿದ್ದಾರೆ. ಮೃತಕಾಲಕ್ಕೆ ಇವರಿಗೆ ಸುಮಾರು 70 ವರ್ಷ ಪ್ರಾಯವಾಗಿದ್ದು ಇವರು ಪತಿ, ಓರ್ವ ಪುತ್ರಿ ಹಾಗೂ ಅಪಾರ ಬಂಧು ಬಳಗದವರನ್ನು ಅಗಲಿದ್ದಾರೆ.

### ಮಂಜುನಾಥ ಆರೂರು

ಆರೂರಿನ ಸೀತಾರಾಮರಾಯರ ಮಗ ಶ್ರೀ ಮಂಜುನಾಥ ಆರೂರು (64 ವರ್ಷ) ಇವರು ತಾ.03-10-2010ರಂದು ಮುಂಬಯಿಯಲ್ಲಿ ನಿಧನರಾದರು. ಇವರು ಕುಂಜಾಲು (ನೀಲಾವರ) ಲಕ್ಷ್ಮೀನಾರಾಯಣರಾಯರ ಅಕ್ಕನ ಮಗ. ಇವರು ಪತ್ನಿ, ಮಕ್ಕಳು ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

### ಉಮೇಶ್ ರಾವ್

ಪಾವಂಜೆಯ ಉಮೇಶ್ ರಾವ್ (59 ವರ್ಷ) ಇವರು ತಾ.08-10-2010ರಂದು ನಿಧನರಾದರು. ಇವರು ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ ಹಾಗೂ ಅಪಾರ ಬಂಧುಬಳಗವನ್ನು ಅಗಲಿರುತ್ತಾರೆ.

### ಬಿ. ಮೋಹನರಾವ್

ಬೈಲೂರಿನ ಹೋಟೇಲ್ ಉದ್ಯಮಿ ದಿ| ವನಜಮ್ಮನವರ ಪುತ್ರ ಬಿ. ಮೋಹನರಾವ್ (53 ವರ್ಷ) ತಾ.29-10-2010ರಂದು ಅಸೌಖ್ಯದಿಂದ ಸ್ವಗೃಹದಲ್ಲಿ ನಿಧನರಾದರು. ಮೃತರು ಪತ್ನಿ, ಮೂವರು ಪುತ್ರರು, ಅಪಾರ ಬಂಧುಬಳಗವನ್ನು ಅಗಲಿರುತ್ತಾರೆ.

# ತುಳುನಾಡಿನಲ್ಲಿ ಬ್ರಾಹ್ಮಣ್ಯ

ದಿ| ಪ್ರೊ| ಗುರುರಾಜ ಭಟ್ಟರ
ಕೃತಿಯಿಂದ ಸಂಗ್ರಹಿಸಿದ ಭಾಗ
ಸಂಗ್ರಹ : ಸಿ.ಎಸ್.ರಾವ್.

(ಹಿಂದಿನ ಸಂಚಿಕೆಯಿಂದ)

ಮೇಲಿನ ವಿವರವು ಸಂಪ್ರದಾಯವನ್ನು ಬಿಟ್ಟಿಲ್ಲವಾದರೂ ಹಲಕೆಲವು ಸಂಪ್ರದಾಯಗಳಿಂದ ಚಾರಿತ್ರಿಕ ಸಂಗತಿಯನ್ನು ಎತ್ತಿ ಹಿಡಿಯಬಲ್ಲದು. ಉತ್ತರ ಕನ್ನಡದಲ್ಲಿ ಬ್ರಾಹ್ಮಣರನ್ನಿರಿಸಲು ಯಾವ ಋಷಿಯ ಪ್ರೇರಣೆಯು ಇರಲಿಲ್ಲವೆಂದೂ, ಮಯೂರವರ್ಮನು ತಾನಾಗಿಯೇ ಸ್ವಯಂ ಪ್ರೇರಿತನಾಗಿ ಬ್ರಾಹ್ಮಣರನ್ನು ತರಿಸಿದನೆಂದೂ, ಈ ಅರಸನಿಗೆ ವಿರೋಧಿಗಳೂ ಬೇಡರೆಂದೂ (ಬೇಡರೆಂದರೆ ಬಿಲ್ಲವರೇ) ಲೋಕಾದಿತ್ಯನು ಕದಂಬ ಕುಲಕ್ಕೆ ಸೇರಿದವನಲ್ಲವೆಂದೂ ಕೆಲವು ಸೂಚನೆಗಳು ಇದರಿಂದ ದೊರಕುತ್ತದೆ.

14) ಅಲೂಪರ ಶಾಸನಗಳಲ್ಲಿ ಪುರೋಹಿತರು ಯಾ ಪೂಜಾರಿಗಳು ಕಂಡು ಬರುವುದಾದರೂ ಗ್ರಾಮ ಪದ್ಧತಿಗಳಲ್ಲಿ ಹೇಳಿದ ಯಾವುದೊಂದು ಕುಟುಂಬದವರಾದರೂ ತೋರಿ ಬರುವುದಿಲ್ಲ. ವಿಜಯನಗರ ಸಮ್ರಾಜ್ಯ ಸ್ಥಾಪನೆಯಾದ ನಂತರ ಶಿಲಾಶಾಸನಗಳಲ್ಲಿ ಕೆಲವು ಕುಟುಂಬದವರು ಸಾರ್ವಜನಿಕ ಶಾಸನಗಳಿಗೆ ಸಾಕ್ಷಿಗಳಾಗಿ ಯಾ ದಾನವಮಾಡಿದವರಾಗಿ ಕಂಡು ಬರುವರು. ವಿಜಯನಗರದ ಎರಡನೆಯ ಹರಿಹರನ ಕಾಲದಲ್ಲಿ ಬಾರ್ಕೂರಿನ ಮೂಡುಕೇರಿಯಲ್ಲಿರುವ ಸೋಮೇಶ್ವರ ದೇವಸ್ಥಾನಕ್ಕೆ 1379–80ರಲ್ಲಿ ಮಾಡಿದ ದಾನ ಶಾಸನದಲ್ಲಿ ಹೊಳ್ಳರೂ, ವಿಜಯನಗರದ ಎರಡನೆಯ ದೇವರಾಯನ ಕಾಲದಲ್ಲಿ ಬಾರಕೂರ ಮಣಿಗಾರ ಕೇರಿಯಲ್ಲಿರುವ ಸೋಮನಾಥ ದೇವಸ್ಥಾನಕ್ಕೆ 1437–38ರಲ್ಲಿ ಮಾಡಿದ ದಾನಶಾಸನದಲ್ಲಿ ಮಯ್ಯರೂ ಎರಡನೆಯ ಹರಿಹರನ ಕಾಲದಲ್ಲಿ ಬಾರಕೂರಿನ ಮಣಿಗಾರ ಕೇರಿಯಲ್ಲಿರುವ ಸೋಮನಾಥ ದೇವರಿಗೆ 1394–95ರಲ್ಲಿ ಮಾಡಿದ ದಾನಶಾಸನದಲ್ಲಿ ಕಾರಂತರೂ, ಯಾವ ಕಾಲದ್ದೆಂದು ಸೂಚಿಸದೆ ಮೇಲೆ ಹೇಳಿದ ಸೋಮನಾಥ ದೇವರಿಗೆ ಹಂದೆಯವರು ಮಾಡಿದ ದಾನ ಶಾಸನದಲ್ಲಿ ಹಂದೆಯರೂ, ವಿಜಯನಗರದ ಎರಡನೆಯ ವಿರೂಪಾಕ್ಷನ ಕಾಲದಲ್ಲಿ 1476–77ರಲ್ಲಿ ಮಾಡಿದ ಶಾಸನದಲ್ಲಿ ಚಿಟ್ಟುಪಾಡಿ ಕುಟುಂಬದವರೂ, ಶಂಕರ ಒಡೆಯರೂ ಬಾರಕೂರಿನ ವೈಸರಾಯರಾಗಿರುವಾಗ 1395–96ರಲ್ಲಿ ಮಾಡಿದ ದಾನ ಶಾಸನದಲ್ಲಿ ಮೂಡಿಲನಿಡಂಬೂರು ಕುಟುಂಬದವರೂ ತೋರಿಬರುತ್ತಾರೆ. ಹೀಗಾದುದರಿಂದ ವಿಜಯನಗರ ಸಾಮ್ರಾಜ್ಯವು ಸ್ಥಾಪನೆಯಾಗುವ ವರೆಗೆ ಗ್ರಾಮ ಪದ್ಧತಿಯಲ್ಲಿ ಹೇಳಿರುವ ಯಾವುದೊಂದು ಕುಟುಂಬಕ್ಕೂ ಇಲ್ಲಿಯ ಸಾರ್ವಜನಿಕ ದೇವಸ್ಥಾನಗಳಿಗೂ ಏನಾದರೂ ಸಂಬಂಧವಿರಬಹುದೆಂದು ತಿಳಿದುಕೊಳ್ಳಲು ಆಧಾರ ಕಂಡುಬರುವುದಿಲ್ಲ.

15) ಪಾತಾಳಿ ವಿಚಾರ–ಉತ್ತರ ಸಹ್ಯಾದ್ರಿ ಖಂಡದ ಇಪ್ಪತ್ತಮೂರನೆಯ ಅಧ್ಯಾಯದಲ್ಲಿ ಪಾಖಾಳಿ ಉತ್ಪತ್ತಿಯನ್ನು ವಿವರಿಸಿದೆ. ಆದರೆ ಈ ವಿವರವು ವಸ್ತುಸ್ಥಿತಿಯ ನಿಜವಾದ ನಿರೂಪಣೆಯಾಗಿರದೆ ಕೃತ್ರಿಮ ಉದ್ದೇಶದಿಂದ ಬರೆಯಲ್ಪಟ್ಟುದೆಂದು ವಿಚಾರ ಅನ್ವೇಷಣೆಯಿಂದ ತಿಳಿದು ಬರುತ್ತದೆ. ಪಾಖಾಳಿ ಎಂಬುದು ಜಾತಿವಾಚಕವಲ್ಲ. ಕೆಲಸದ ಹೆಸರು ಆಗಿದ್ದು, 'ಪಾರುಪತ್ಯಗಾರ'ವೆಂದು ನನಗೆ ಕಂಡುಬರುತ್ತದೆ. ಇದಕ್ಕೆ ಈ ಕೆಳಗಿನ ದೃಷ್ಟಾಂತಗಳು ಸಹಾಯಕಗಳಾಗಿವೆ. ನಾರಾಯಣ ಪೆರೋಡಿತ್ತಾಯ ಎಂಬವರು ಕ್ರಿ.ಶ.1890ರಲ್ಲಿ ಪುತ್ತೂರು ದೇವಸ್ಥಾನದ ಮೆನೇಜರರೂ, ಪಾಟಾಳಿಯೂ ಆಗಿದ್ದರ. ಇವರು ಶಿವಳ್ಳಿ ಬ್ರಾಹ್ಮಣರು. ಅದೇ ದೇವಸ್ಥಾನದಲ್ಲಿ ಕ್ರಿ.1916ರ ವರೆಗೆ ಶಿವಳ್ಳಿ ಬ್ರಾಹ್ಮಣರಾದ ಬಲಿನಾಡು ನೆಲ್ಲಿತ್ತಾಯ ದಾಸಪ್ಪನವರ ಮಗ ಸುಬ್ರಾಯರು ಪಾಟಾಳಿಯಾಗಿದ್ದರು. ಕುಂಬಳೆ ಕೂಡ್ಲು ಶ್ಯಾನುಭಾಗರ ಜಾತಿಯಲ್ಲಿ ಪಾತಾಳಿಯಿದ್ದು ಇವರು ಮನೆಯವರನ್ನು ಪಾತಾಳಿ ಎಂಬ ರೂಢಿಯು ಇಂದಿಗೂ ಇದೆ. ಈಗಲೂ ಪೆರಡೂರು, ಎಲ್ಲೂರು ದೇವಸ್ಥಾನಗಳಲ್ಲಿ ಪಾತಾಳಿಯು ಶಿವಳ್ಳಿ ಬ್ರಾಹ್ಮಣ ವರ್ಗಕ್ಕೆ ಸೇರಿದವರು ಆಗಿರುವರು. ಇನ್ನೂ ಅನೇಕ ದೃಷ್ಟಾಂತಗಳನ್ನು ಕೊಡಬಹುದು. ಆದುದರಿಂದ ಉತ್ತರ ಸಹ್ಯಾದ್ರಿಯಲ್ಲಿ ಹೇಳಿದಂತೆ ಪಾಟಾಳಿಯು ದಾಸಿ ಪುತ್ರನಾದುದು, ಸಹಪಂಙ್ತಿ ಭೋಜನೆ, ಪುರಾಣ ಶ್ರವಣ, ರುದ್ರಾಕ್ಷಮಾಲಾಧಾರಣ, ಸಾಲಿಗ್ರಾಮ ಪೂಜಾ, ತ್ರಿಪುಂಡ್ರಧಾರಣಾ, ಶಿರೋಭೂಷಣಧಾರಣ, ಬ್ರಾಹ್ಮಣ ಸಮೂಹದಲ್ಲಿ ಪ್ರವೇಶ, ಪಂಚಯಜ್ಞತರ್ಪಣ, ಕಾಮವೃತಾದಿಗಳ ಆಚರಣೆ–ಇತ್ಯಾದಿಗಳನ್ನು ಮಾಡಬಾರದವನಾದುದು, ನೀಚ ಮಾರ್ಗಾವಲಂಬಿಯಾದುದು ಹೇಗೆ ಎಂಬುದು ವಿಚಾರಕ್ಕೆ ನಿಲುಕದಾಗಿದೆ. ಈ ಪಾಟಾಳಿಯು ಶಿವ ನಿರ್ಮಾಲ್ಯವನ್ನು ಭಕ್ಷಿಸುತ್ತಿರಬೇಕಾಗಿ ಉತ್ತರ ಸಹ್ಯಾದ್ರಿಯಲ್ಲಿ ಉಲ್ಲೇಖವಿರುವುದರಿಂದಲೂ ಶಿವ ನಿರ್ಮಾಲ್ಯ ತ್ಯಾಜ್ಯವಾದುದು ವೈಷ್ಣವ ಪಂಥದ ಪ್ರಚಾರದ ನಂತರ ಆದುದರಿಂದಲೂ ಈ ವೈಷ್ಣವ ಧರ್ಮವು ತುಳುನಾಡಿನಲ್ಲಿ ಹದಿಮೂರನೆಯ ಶತಮಾನದಲ್ಲಿ ಪ್ರಚಾರಕ್ಕಾರಂಭವಾದುದರಿಂದಲೂ ಈ ಸಂಗತಿಯನ್ನೊಳಗೊಂಡ ಸಹ್ಯಾದ್ರಿ ಖಂಡವು ಯಾ ಗ್ರಾಮಪದ್ಧತಿಯು ಹದಿಮೂರನೆ ಶತಮಾನದ ಅನಂತರವೇ ರಚಿಸಲ್ಪಟ್ಟುದೆಂಬುದು ನಿಶ್ಚಯವಾಗುತ್ತದೆ. ಆದುದರಿಂದ ಪಾಟಾಳಿಯು ದೇವಸ್ಥಾನದ ಗೌರವಸ್ಥ ಉದ್ಯೋಗಸ್ಥನಾಗಿದ್ದು ಜಾತಿ ನಿರ್ದೇಶಕನಲ್ಲವೆಂದು ತಿಳಿಯುವುದು, ಅಗತ್ಯವಾಗಿದೆ. (ಮುಂದುವರಿಯುವುದು)

## ಹನಿಗವನಗಳು

### ಯಾರಿಗೆ ಸಿಗಲ್ಲ ಹೆಣ್ಣು

ಡೊಳ್ಳು ಹೊಟ್ಟೆಯ
ಸೊಂಡಿಲು
ಮುಖದ
ಗಣಪನಿಗೆ
ಸಿಕ್ಕಿದರು
ಕನ್ಯೆಯರು
ಸಿದ್ಧಿ–ಬುದ್ಧಿ
ಆಗಿಬಿಡ್ತು
ಶುಭ–ಲಾಭ
ಮಕ್ಕಳು
ಯಾರಿಗೆ ಸಿಗಲ್ಲ
ಹೆಣ್ಣು?
ಕಾಯಬೇಕು
ಕಾಲ ಬರಬೇಕು
ಅಷ್ಟೆ.

### ಒಪ್ಪಬೇಕಲ್ಲ

ಗಿಡ್ಡ ದೇಹದ
ಡೊಳ್ಳು
ಹೊಟ್ಟೆಯ
ಆನೆ ಮುಖದ
ಗಣಪನಿಗೆ
ಮದುವೆ
ಆಗಿಲ್ಲ ಅಂದ್ರೆ
ಒಪ್ಪಬೇಕಲ್ಲ
ಯಾವ
ಹುಡುಗಿ?

### ಸರ್ಜರಿ

ಪುರಾತನ ಕಾಲದಲ್ಲಿಯೇ
ಆನೆಯ
ಮುಖದ
ಸೊಂಡಿಲು
ಗಣಪತಿಗೆ
ಆಯಿತು
ಬರಾಬರಿ
ಸರ್ಜರಿ

**ಮಾರ್ಪಳ್ಳಿ ಆರ್. ಮಂಜುನಾಥ್**
**ಶಿವಮೊಗ್ಗ**

### ಹನಿಗವನ

ಲೇಖನಿಯ ಹಿಡಿದು
ಒಮ್ಮೆ ಸೀನಿದಾಗ
ಕವಿಯ ಬಾಯಿಯಿಂದ
ಹೊರಬಂದ
ಒಂದು ಹನಿ

### ವಿಪರ್ಯಾಸ

ಬೇಕೇ ಬೇಕು
ನ್ಯಾಯ ಬೇಕು
ಎಲ್ಲೆಲ್ಲೂ ಕೇಳಿಸುತಿದೆ
ಈ ಒಂದು ಕೂಗು!
ನ್ಯಾಯ ಕೊಡಿಸುವ
ನ್ಯಾಯವಾದಿಗಳೂ
ಕೂಗುವರು ಒಮ್ಮೊಮ್ಮೆ
ಇದೇ ಕೂಗು!

### ಭಯವಿಲ್ಲ

ದಿನ ದಿನವು ಏರುತಿದೆ
ಪೆಟ್ರೋಲು ದರವು
ಸಚಿವ, ಶಾಸಕರಿಗೆ
ಇಲ್ಲ, ಈ ಭಯವು
ಅವರ ಕಾರಿಗೆ ಪೆಟ್ರೋಲು
ನೀಡುತಿದೆ ಸರಕಾರ
ನಡೆಸಬೇಡವೇ ಅವರು
ನಿತ್ಯ ಅಧಿಕಾರ

### ವೃದ್ಧಾಪ್ಯ

ಹುಣ್ಣಿಮೆಯಿಂದ
ಅಮಾವಾಸ್ಯೆಯತ್ತ
ಸಾಗುವ
ಹಿರಿಯರ
ಪಯಣ

### ಪ್ರೀತಿ–ಕಾಮ

ಸಾಗರದ ಗರ್ಭದಿಂದ
ಹೊರತೆಗೆದ ಮುತ್ತು
ಪ್ರೀತಿ!
ದಡಕ್ಕೆ ಅಪ್ಪಳಿಸಿ
ಹಿಂದಕ್ಕೋಡುವ ಅಲೆ
ಕಾಮ

**ಗೋ.ರಾ.ಕೆ. ಕಡಬ**

### ವಿಪರ್ಯಾಸ

ಸುಡುವ ಬಿಸಿಲಿನ ಮಟಮಟ ಮಧ್ಯಾಹ್ನ
ನಮ್ಮೂರ ಶಾಲಾ ರಸ್ತೆಯಲ್ಲಿ ನಡೆಯುತ್ತಿದ್ದೆ
ಹೊರಲಾಗದ ಮಣ ಭಾರದ ಚೀಲವನು ಹೊತ್ತು
ಪುಟ್ಟ ಬಾಲೆಯೊಬ್ಬಳು ಅಳುತ್ತಿದ್ದಳು
ಹತ್ತಿರ ಹೋಗಿ ಅವಳ ತಲೆ ನೇವರಿಸಿದೆ
''ಏನು ಪುಟ್ಟೀ.... ಅಮ್ಮ ಬರಲಿಲ್ಲವೇ?'' ಎಂದೆ
ಬಿಕ್ಕಳಿಕೆಯ ನಡುವೆ ಅವಳೆಂದಳು
ನನಗೆ ಅಮ್ಮನೇ ಇಲ್ಲ!
ಅಯ್ಯೋ ಕರುಳು ಚುರುಕ್ ಎಂದಿತು
ಮೆಲ್ಲನೆತ್ತಿಕೊಂಡು ಕಣ್ಣೊರೆಸಿದೆ
ಅಪ್ಪ ಬಂದಾರು ಸುಮ್ಮನಿರು ಎಂದೆ
ನನಗೆ ಅಪ್ಪನೂ ಇಲ್ಲ ಎಂದಳು!
ಛೇ ವಿಧಿ ಎಂತಾ ಕ್ರೂರಿ ನನ್ನ ಮನಸೆಂದಿತು
ಹಾಲುಗೆನ್ನೆಯ ಕಂದಮ್ಮ ನಡುರಸ್ತೆಯಲ್ಲಿ ತಬ್ಬಲಿ
ಎತ್ತಿ ಅಪ್ಪಿದೆ ಹೂಮುತ್ತನಿಟ್ಟೆ
ಮನೆಯಲ್ಲಿ ಇನ್ಯಾರಿದ್ದಾರೆ ಮಗೂ....
ಇದಾರೆ
ಡ್ಯಾಡಿ ಮತ್ತು ಮಮ್ಮಿ ಎಂದವಳೆ
ಓ ಮಮ್ಮಿ... ಎಂದು ಓಡಿಯೇ ಬಿಟ್ಟಳು
ಎದುರು ಬಂದ ಬೋಳು ಹಣೆಯ ಅರ್ಥ
ತೆರೆದೆದೆಯ
ಹೆಣ್ಣೊಬ್ಬಳ ಬಳಿ
ಮಟ ಮಟ ಮಧ್ಯಾಹ್ನ
ನಡುರಸ್ತೆಯಲಿ ತಬ್ಬಲಿಗಳು
ನಾನು ಮತ್ತು ನನ್ನ ಕನ್ನಡ

### ಗೆಳತಿ

ಕನಸು–ನನಸುಗಳ
ಭೇದವನ್ನೇ ಅರಿಯದ ಮನಸ್ಸಿ–
ನಲಿ ಪ್ರೀತಿ ಪ್ರೇಮದ ವಿಷಬೀಜ ಬಿತ್ತಿ
ಸಾಲದಕ್ಕೆ ಇದೀಗ ಅಪರಿಚಿತಳಂತೆ ವರ್ತಿಸಿ
ಜುಲೈ ತಿಂಗಳಲ್ಲಿ ಸುರಿವ ಬಿರುಮಳೆಯಂತೆ
ಮನಸನ್ನು ಸಿಕ್ಕಾಪಟ್ಟೆ ರಾಡಿ ಮಾಡಿಸಿ
ಇಂದಿನ ನನ್ನೆಲ್ಲಾ ಪ್ರಮಾದಗಳಿಗೂ
ಓ ಗಳೆತೀ.... ನೀನೇ ಸ್ಫೂರ್ತಿ

### ಬ್ಯೂಟಿ

ಕಂಡೆ ಒಂದು ಸುಂದರ ಬ್ಯೂಟಿ
ಅವಳ ಹೆಸರೇ ಸ್ವೀಟೀ!
ಸನಿಹಕೆ ಹೋದೆ ರಸ್ತೆ ದಾಟಿ
ಅಂದೆ! ಆಗುವೆಯಾ? ಸಂಗಾತಿ
ಕೊಡುವೆನು ನಿನಗೆ ನನ್ನ ಹಾರ್ಟು
ಎನ್ನಲು ಬಿತ್ತು... ಕೆನ್ನೆಗೆ ಎರಡು ಏಟು

**ಎಂ. ಗಣೇಶ್ ರಾವ್ ಬಾರಕೂರು**

**ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.),**
ಕುಂಜಿಬೆಟ್ಟು, ಉಡುಪಿ.
**ನಮ್ಮ ಸಮಾಜದ 87 ವಿದ್ಯಾರ್ಥಿಗಳಿಗೆ ರೂ.70,106/- ವಿದ್ಯಾರ್ಥಿವೇತನವನ್ನು ಸಂಘದ ವತಿಯಿಂದ ಈ ಬಾರಿ ನೀಡಲಾಗಿದೆ.**

### ವಿಳಾಸ ಬದಲಾವಣೆ

**C. A. KIRAN SHANBOUGH**
2nd Floor,
Near Shobha Tulit Apartment
24th Main, 20th Cross,
5th Face, V.P.Nagar,
Bangalore - 560078

**SATHYANARAYANA RAO**
"Parvathi Nilaya"
10 Main, P.M.Nagar,
Doddanagudde, Udupi.

**GANESH K. R.**
"Sri Sadguru"
Behind Hotel Ganesh,
Kukkikatte, Udupi - 576 101.

### ಚಂದನ

ಓ ನನ್ನ ಚಂದನ
ಸರಿ ಹೊಂದಲಿಲ್ಲ ಈ ನಮ್ಮ ಬಂಧನ
ಮನದಲ್ಲಿ ಮೂಡುತಿದೆ ನಿನ್ನ ನೆನಪಿನ ಕವನ
ಯಾಕಾದ್ರೂ ಆಯ್ತು ಭೂಮಿಯಲಿ ನನ್ನ ಜನನ
ನಿನ್ನಂದ ನಾಕಲಿತೆ ಈ ಬದುಕಿನ ಪಯಣ
ನನ್ನ ಬಾಳಲಿ ಬೆಳಕಾಗಿ ಬಂದವಳು ಚಂದನ
ಯಾರಿಗೆ ಹೇಳಲಿ ನಿನ್ನ ನನ್ನ ಕಥನ!
ಸುಖವಾಗಿರಲಿ ಚಂದನನ ಬದುಕಿನ ಪಯಣ
ನಿನಗಾಗಿ ಸದಾ ಹಾತೊರೆಯುವುದು ಈ ಚಂದ್ರನ ಮನ
ಓ ನನ್ನ ಚಂದದ ಚಂದನ ನಿನಗಿದೋ ನನ್ನ ಕವನ

**ವೈ.ಎ.ರಾವ್**

## ಅಭಿನಂದನೆ

### ಯನ್. ಸುಮಾರಾವ್ ನಂದಳಿಕೆ



ಯನ್. ಸುಮಾ ರಾವ್ ನಂದಳಿಕೆ ಇವರು ಕರ್ನಾಟಕ ಪ್ರೌಢ ಶಿಕ್ಷಣ ಮಂಡಳಿ ನಡೆಸಿದ ಭರತನಾಟ್ಯ ವಿದ್ವತ್ ಪೂರ್ವ ಪರೀಕ್ಷೆಯಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣಳಾಗಿರುತ್ತಾರೆ. ಇವರು ನಂದಳಿಕೆ ಮೂಡುಮನೆ ಗಾಯತ್ರಿ ಸುಧಾಕರ್ ರಾವ್ ಇವರ ಪುತ್ರಿಯಾಗಿದ್ದು ಪ್ರಕೃತ ನಿಟ್ಟೆ ವಿದ್ಯಾಸಂಸ್ಥೆ ಮಂಗಳೂರು ಇಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಅಲ್ಲದೆ ಲಿಡ್ಜೆ, ನಿಟ್ಟೆ ಮತ್ತು ಕೆದಿಂಜೆಯಲ್ಲಿ ಭರತನಾಟ್ಯ ತರಬೇತಿಯನ್ನು ನೀಡುತ್ತಿದ್ದಾರೆ. ಇವರ ಸಾಧನೆಗೆ ಶ್ರೀಶಾರದಾ ಬಳಗದ ಅಭಿನಂದನೆಗಳು

### ಕು। ಗೌತಮಿ ಕೆ. ರಾವ್



ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ ಯವರು ನಡೆಸಿದ 2010ರ ಸಾಲಿನ ಕರ್ನಾಟಕ ಸಂಗೀತ ಜ್ಯೂನಿಯರ್ ಗ್ರೇಡ್ ಪರೀಕ್ಷೆಯಲ್ಲಿ ಕು। ಗೌತಮಿ ಕೆ. ರಾವ್ 378 (94.5%) ಅಂಕಗಳನ್ನು ಗಳಿಸಿ ವಿಶಿಷ್ಟ ಶ್ರೇಣಿಯಲ್ಲಿ ಉತ್ತೀರ್ಣ ಹೊಂದಿರುತ್ತಾಳೆ. ಈಕೆ ವಿದ್ವಾನ್ ಮಧೂರು ಪಿ. ಬಾಲಸುಬ್ರಹ್ಮಣ್ಯ ಇವರ ಶಿಷ್ಯೆ. ಇವಳು ಬಿ. ಕೃಷ್ಣಮೂರ್ತಿ ರಾವ್ ಬ್ರಹ್ಮಾವರ ಹಾಗೂ ಸುಮಂಗಲ ಇವರ ಪುತ್ರಿ. ಬ್ರಹ್ಮಾವರದ ಲಿಟ್ಲರಾಕ್ ಇಂಡಿಯನ್ ಸ್ಕೂಲ್‌ನ 9ನೇ ತರಗತಿಯ ವಿದ್ಯಾರ್ಥಿನಿ. ಇವಳ ಸಾಧನೆಗೆ ಶ್ರೀಶಾರದಾ ಬಳಗದ ಅಭಿನಂದನೆಗಳು

### ಕಾರ್ತಿಕ್ ರಾವ್



ಕಾರ್ತಿಕ್ ರಾವ್ ಇವನು ಹೆಬ್ರಿಯ ನವೋದಯ ಶಾಲೆಯ ವಿದ್ಯಾರ್ಥಿಯಾಗಿದ್ದು ಸಿ.ಬಿ.ಎಸ್.ಇ. ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಪಿ.ಸಿ.ಯಂ. ವಿಷಯದಲ್ಲಿ 95% ಅಂಕಗಳಿಸಿ ಶಾಲೆಗೆ ಪ್ರಥಮ ಸ್ಥಾನ ಪಡೆದಿರುತ್ತಾನೆ. ಈತನು ದಿ। ಕಲ್ಯಾ ಸೀತಾರಾಮ ರಾವ್ ಮತ್ತು ಶ್ರೀಮತಿ ಲೀಲಾವತಿ ಅವರ ಪೌತ್ರ. ಹಾಗೂ ದಿ। ಬೋಳ ಗುಂಡುರಾವ್ ಮತ್ತು ಶ್ರೀಮತಿ ಲಕ್ಷ್ಮಿ ದಂಪತಿಗಳ ಮೊಮ್ಮಗ. ಈತನು ಎಸ್‌ಜೆಸಿಇ ಮೈಸೂರಿನಲ್ಲಿ ಇಎಂಡ್‌ಸಿ ವಿಭಾಗದಲ್ಲಿ ವ್ಯಾಸಂಗ ಮುಂದುವರಿಸುತ್ತಿದ್ದಾನೆ. ಇವನ ಸಾಧನೆಗೆ ಶ್ರೀಶಾರದಾ ಬಳಗದ ಅಭಿನಂದನೆಗಳು

### ಕು। ಛಾಯಾ ಭಾಗವತ್



2009-10ನೇ ಸಾಲಿನಲ್ಲಿ ಜರುಗಿದ ಪಿಯುಸಿ ಪರೀಕ್ಷೆಯಲ್ಲಿ ಕು। ಛಾಯಾ ಭಾಗವತ್ ಇವಳು 520 ಅಂಕಗಳನ್ನು ಗಳಿಸಿ ಪಿ.ಸಿ.ಎಂ. ಹಾಗೂ ಪಿ.ಸಿ.ಎಂ.ಬಿ.ಯಲ್ಲಿ ಶೇ.90 ಅಂಕಗಳನ್ನು ಗಳಿಸಿ ವಿಶಿಷ್ಟ ಶ್ರೇಣಿಯಲ್ಲಿ ತೇರ್ಗಡೆಯಾಗಿರುತ್ತಾಳೆ. 2008-09ನೇ ಸಾಲಿನಲ್ಲಿ ಜರಗಿದ ಕರ್ನಾಟಕ ಪ್ರೌಢಶಿಕ್ಷಣ ಮಂಡಳಿಯವರು ನಡೆಸಿದ ಭರತನಾಟ್ಯ ಸೀನಿಯರ್ ಗ್ರೇಡ್ ಹಾಗೂ ಕರ್ನಾಟಕ ಸಂಗೀತ ಜೂನಿಯರ್ ಗ್ರೇಡ್ ಪರೀಕ್ಷೆಯಲ್ಲಿ ವಿಶಿಷ್ಟ ದರ್ಜೆಯಲ್ಲಿ ಪಾಸಾಗಿರುತ್ತಾಳೆ. ಕು। ಛಾಯಾ ಉಡುಪಿಯ ವಿದ್ಯೋದಯ ಪದವಿಪೂರ್ವ ಕಾಲೇಜಿನ ವಿದ್ಯಾರ್ಥಿನಿಯಾಗಿದ್ದು ಪ್ರಸ್ತುತ ಮಂಗಳೂರು ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (MITE) ಕಾಲೇಜಿನಲ್ಲಿ ಪ್ರಥಮ ಬಿ.ಇ.(E&C) ಯಲ್ಲಿ ತನ್ನ ವ್ಯಾಸಂಗ ಮುಂದುವರಿಸುತ್ತಿದ್ದಾಳೆ. ಇವಳು ಬಾರ್ಕೂರಿನ ಶ್ರೀ ಪ್ರಕಾಶ್ ಭಾಗವತ್, ತೋಟಗಾರಿಕಾ ಅಧಿಕಾರಿ, ಕಾರ್ಕಳ ಹಾಗೂ ಉಡುಪಿ ಜಿ.ಪಂ.ನಲ್ಲಿ ಉದ್ಯೋಗಿಯಾಗಿರುವ ಶ್ರೀಮತಿ ಜಯಲಕ್ಷ್ಮೀ ಇವರ ಪುತ್ರಿ. ಇವಳ ಸಾಧನೆಗೆ ಶ್ರೀಶಾರದಾ ಬಳಗದ ಅಭಿನಂದನೆಗಳು

## ಪದೋನ್ನತಿ

ಶ್ರೀ ಪ್ರಕಾಶ್ ಭಾಗವತ್, ಬಾರ್ಕೂರು ಇವರು ತೋಟಗಾರಿಕಾ ಅಧಿಕಾರಿಯಾಗಿ ಭಡ್ತಿ ಹೊಂದಿ ಉಡುಪಿ ಹಿರಿಯ ಸಹಾಯಕ ತೋಟಗಾರಿಕಾ ನಿರ್ದೇಶಕರ ಕಛೇರಿಯಿಂದ, ಕಾರ್ಕಳ ಹಿರಿಯ ಸಹಾಯಕ ತೋಟಗಾರಿಕಾ ನಿರ್ದೇಶಕ ಕಛೇರಿಗೆ ವರ್ಗಾವಣೆ ಹೊಂದಿ ಕರ್ತವ್ಯಕ್ಕೆ ಹಾಜರಾಗಿರುತ್ತಾರೆ.

## ಮಾಂಗಲ್ಯಂ ತಂತುನಾನೇನ ....

ತಂತ್ರಾಡಿ ಶ್ರೀಮತಿ ಮತ್ತು ಶ್ರೀ ಸೂರ್ಯನಾರಾಯಣ ಶ್ಯಾನುಭೋಗರ ಪುತ್ರ **ಚಿದಾನಂದ** ಹಾಗೂ ದಿ। ಸೀತಾರಾಮ ಭಟ್ಟರ ಪುತ್ರಿ **ಕು। ವಿನೋದ** ಇವರ ವಿವಾಹವು ತಾ.11-11-10 ರಂದು ಪುತ್ತೂರು ಶ್ರೀ ಲಕ್ಷ್ಮಿವೆಂಕಟೇಶ್ವರ ದೇವಸ್ಥಾನದ ಪದ್ಮಾವತಿ ಕಲಾಮಂದಿರದಲ್ಲಿ ನೆರವೇರಿತು.

ಬಪ್ಪನಾಡಿನ ಕೀರ್ತಿಶೇಷ ಪಂಡಿತ ಎಚ್. ವಾಸುದೇವಯ್ಯನವರ ಪೌತ್ರಿ ಶ್ರೀಮತಿ ಸುಚಿತ್ರಾ ಮತ್ತು ಡಾ। ಬಿ. ಎಚ್. ಶ್ರೀಪತಿ ರಾವ್‌ರವರ ಪುತ್ರಿ **ಕು। ದಿವ್ಯಾ** ಹಾಗೂ ಕೀರ್ತಿಶೇಷ ವಕೀಲ ಭಗವಾನ್‌ದಾಸರ ಪೌತ್ರ, ಶ್ರೀಮತಿ ಮಧು ಮತ್ತು ಡಾ। ಸತ್ಯವೀರ್‌ರವರ ಪುತ್ರ **ಸಮೀರ್** ಇವರ ವಿವಾಹವು ತಾ.11-11-2010ರಂದು ಮಂಗಳೂರಿನ ಮಣ್ಣಗುಡ್ಡೆಯ ಪ್ರತಾಪನಗರದ ಸಂಘನಿಕೇತನದಲ್ಲಿ ಗೋಧೂಳಿ ಲಗ್ನ ಸುಮುಹೂರ್ತದಲ್ಲಿ ನೆರವೇರಿತು.

## ಶುಭಜನನ

ತಾ.14-10-2010ರಂದು ಟಿ.ವಿಶ್ವನಾಥ ಶ್ಯಾನುಭಾಗ್ ಮತ್ತು ಶ್ರೀಮತಿ ರಶ್ಮಿ ದಂಪತಿಗಳಿಗೆ ಗಂಡು ಮಗುವಿನ ಜನನ.

## ವೃಶ್ಚಿಕ ಮಾಸ ವಿಶೇಷ ದಿನಗಳು

| | |
|---|---|
| 16-11-2010 | ವೃಶ್ಚಿಕ ಸಂಕ್ರಮಣ |
| 17-11-2010 | ಸರ್ವೇಕಾದಶೀ |
| 19-11-2010 | ಪ್ರದೋಷಃ |
| 21-11-2010 | ಅನುರಾಧಾ ನಕ್ಷತ್ರಾರಂಭ |
| 25-11-2010 | ಸಂಕಷ್ಟಹರ ಚತುರ್ಥಿ<br>ಚಂದ್ರೋದಯ ಘಂಟೆ ರಾತ್ರಿ, 9-27ಕ್ಕೆ |
| 01-12-2010 | ಪೂರ್ಣಿಮಾ |
| 02-12-2010 | ಸ್ಮಾರ್ತೈಕಾದಶೀ<br>ಭಾ.ವೈ.ಏಕಾದಶೀ<br>ಜ್ಯೇಷ್ಠಾನಕ್ಷತ್ರಾರಂಭ |
| 03-12-2010 | ಪ್ರದೋಷಃ |
| 05-12-2010 | ಅಮಾವಾಸ್ಯಾ |
| 11-12-2010 | ಸುಬ್ರಹ್ಮಣ್ಯ ಷಷ್ಠೀ |
| 16-12-2010 | ಧನು ಸಂಕ್ರಮಣ |

## ವೈದ್ಯಕೀಯ ವೇದಿಕೆ-ಪ್ರಶ್ನೆ ಮತ್ತು ಉತ್ತರ

ಡಾ। ವೈ. ಸುದರ್ಶನ ರಾವ್

**ಪ್ರಶ್ನೆ : ತಲೆಗೆ ಏಟು ಬಿದ್ದ ಸಂದರ್ಭದಲ್ಲಿ ಮೆದುಳಿಗೇನಾದರು ಹಾನಿಯಾಗಿದೆಯೇ ಎಂದು ತಿಳಿಯುವುದು ಹೇಗೆ?**

**ಉತ್ತರ :** ರಸ್ತೆ ಅಪಘಾತ, ಎತ್ತರದಿಂದ ಬಿದ್ದಿರುವುದು, ಮಾರಕಾಯುಧಗಳಿಂದ ಹೊಡೆದಂತಹಾ ಭೀಕರ ಸಂದರ್ಭಗಳಲ್ಲದೇ, ಕಾಲುಜಾರಿ ಬಿದ್ದಿರುವಂತಹ ಸಣ್ಣ ಪ್ರಮಾಣದ ಘಟನೆಗಳಲ್ಲೂ ತಲೆಗೆ ಏಟು ಬಿದ್ದರೆ ಮೆದುಳಿಗೆ ಹಾನಿಯಾಗುವ ಸಂಭವವಿರುತ್ತದೆ. ಕೆಲವೊಮ್ಮೆ ಇಂತಹಾ ಕೇಸುಗಳಲ್ಲಿ ತಲೆಯಲ್ಲಿ ಹೊರಗಿನಿಂದ ಕಾಣಿಸುವಂತಹ ಗಾಯಗಳು ಸಹಾ ಇರುವುದಿಲ್ಲ.

ಮೆದುಳು ತಲುಬುರುಡೆಯೆಂಬ ಗಟ್ಟಿಯಾದ ಎಲುಬಿನಿಂದ ಮಾಡಿರುವಂತಹ ಪೆಟ್ಟಿಗೆಯೊಳಗೆ ಭದ್ರವಾಗಿ ಸಂರಕ್ಷಿಸಲ್ಪಟ್ಟಿರುವ ಅತೀ ನಾಜೂಕಾದ ಅಂಗ. ಮೆದುಳು ಕೆಲಸ ಮಾಡದಿದ್ದರೆ ನಮಗೆ ಅಸ್ತಿತ್ವವೇ ಇಲ್ಲವೆನ್ನಬಹುದು. ನಮ್ಮ ದೇಹದ ಎಲ್ಲಾ ಅಂಗಗಳೂ ಕರಾರುವಕ್ಕಾಗಿ, ಶಿಸ್ತುಬದ್ಧವಾಗಿ ಕಾರ್ಯನಿರ್ವಹಿಸುವಂತೆ ನೋಡಿಕೊಳ್ಳುವ ಅಂಗ ಇದು. ನಮ್ಮ ಭಾವನೆಗಳು, ಯೋಚನೆಗಳು, ಬುದ್ಧಿ, ಮನಸ್ಸುಗಳು ಅಡಕವಾಗಿರುವ ಅಂಗ ಇದು. ನಮ್ಮ ಪರಿಸರವನ್ನು ಇಂದ್ರಿಯಗಳ ಮೂಲಕ ಗ್ರಹಿಸಿ ಅದಕ್ಕೆ ದೇಹವು ನೀಡಬೇಕಾದ ಸೂಕ್ತ ಪ್ರತಿಕ್ರಿಯೆಯ ಆದೇಶಗಳು ಹೊರಡುವುದೇ ಈ ಅಂಗದಿಂದ.

ಮೆದುಳಿಗೆ ಬಿದ್ದ ಏಟು ಎರಡು ತರಹದ್ದಾಗಿರಬಹುದು. ಮೆದುಳು ಮತ್ತು ತಲೆಬುರುಡೆಯ ಮಧ್ಯೆ ರಕ್ತಸ್ರಾವವಾಗಿ ಮೆದುಳಿನ ಮೇಲೆ ಹೆಪ್ಪುಗಟ್ಟಿದ ರಕ್ತವು ಒತ್ತಡ ಬೀರುವುದೊಂದು ಬಗೆಯದ್ದಾದರೆ, ಮೆದುಳಿನ ಅಂಗಾಂಶಗಳಿಗೆ ಏಟಿನಿಂದಾಗಿ ಘಾಸಿಯಾಗುವುದು ಇನ್ನೊಂದು ಬಗೆ. ಮೊದಲನೆಯದ್ದರಲ್ಲಿ ಮೆದುಳಿನ ಅಂಗಾಂಶಗಳಿಗೇನೂ ಘಾಸಿಯಾಗಿರುವುದಿಲ್ಲ, ಆದರೆ ತುಂಬಾ ತೀವ್ರವಾಗಿ ಏಟು ಬಿದ್ದಿದ್ದಲ್ಲಿ ಈ ಎರಡೂ ತರಹದ ಗಾಯಗಳು ಒಂದೇ ರೋಗಿಗೆ ಆಗಬಹುದು.

ಗಾಯಗೊಂಡ ರೋಗಿಯು ಆಸ್ಪತ್ರೆಗೆ ಬಂದಿರುವಾಗ ಸಹಜವಾಗಿರುವಂತೆ ಕಂಡರೂ ಏಟು ಬಿದ್ದ ತಕ್ಷಣ ಪ್ರಜ್ಞೆ ತಪ್ಪಿರುವುದು, ಕಿವಿ ಮೂಗುಗಳಿಂದ ರಕ್ತ ಒಸರಿರುವುದು, ವಾಂತಿ ಮಾಡಿರುವುದು ಹಾಗೂ ಅಪಸ್ಮಾರ ಬಂದಿರುವುದು ಇವೆಲ್ಲಾ ಮೆದುಳಿಗೆ ಪೆಟ್ಟು ಬಿದ್ದಿರಬಹುದಾಗಿರುವುದನ್ನು ಸೂಚಿಸುವ ಚಿಹ್ನೆಗಳು. ಭೀಕರವಾದ ಅಪಘಾತಗಳು ಅಥವಾ ಸಹ ಪ್ರಯಾಣಿಕರು ಸತ್ತಿದ್ದ ಸಂದರ್ಭದಲ್ಲಿ (ಅಂದರೆ ಅಪಘಾತ ಸಣ್ಣ ಪ್ರಮಾಣದಂತೆ ತೋರಿಕೆಗೆ ಕಂಡಿದ್ದರೂ ಅಪಘಾತದ ಹೊಡೆತದ ತೀವ್ರತೆ ಹೆಚ್ಚೆಂದು ಅರ್ಥ) ಇವನ ಮೆದುಳಿಗೂ ಏಟು ಬಿದ್ದಿರುವ ಸಾಧ್ಯತೆ ಹೆಚ್ಚು. ತೀವ್ರ ತರಹದ ತಲೆನೋವು, ವಾಂತಿ, ಅಪಸ್ಮಾರ, ಪ್ರಜ್ಞೆ ತಪ್ಪಿರುವುದು, ಮತಿಭ್ರಾಂತನಂತೆ ವರ್ತಿಸುವುದು ಇವೆಲ್ಲಾ ಮೆದುಳಿಗೆ ಏಟು ಬಿದ್ದಿರುವುದನ್ನು ಸೂಚಿಸುವ ಚಿಹ್ನೆಗಳು. ಈ ಎರಡು ತರಹದ ರೋಗಿಗಳನ್ನು ಆಸ್ಪತ್ರೆಯಲ್ಲಿ ತೀವ್ರ ನಿಗಾ ವಿಭಾಗದಲ್ಲಿ ಇರಿಸಿ ಮೆದುಳಿಗೆ ಹಾನಿಯಾಗಿರುವುದನ್ನು ವಿವಿಧ ಪರೀಕ್ಷೆಗಳ ಮೂಲಕ ಖಚಿತ ಪಡಿಸಿಕೊಳ್ಳಬೇಕು. ಕೆಲವೊಮ್ಮೆ ತಲೆಗೆ ಏಟು ಬಿದ್ದ ತಕ್ಷಣ ಮೇಲೆ ಹೇಳಿದ ಯಾವುದೇ ಚಿಹ್ನೆಗಳಿಲ್ಲದೇ ಇದ್ದು ಸ್ವಲ್ಪ ಸಮಯದ ಅಥವಾ ಒಂದೆರಡು ದಿನಗಳ ನಂತರ ಮೇಲೆ ಹೇಳಿದ ಚಿಹ್ನೆಗಳು ಕಾಣಿಸಿಕೊಳ್ಳಬಹುದು. ಹಾಗಾಗಿ ತಲೆಗೆ ಏಟು ಬಿದ್ದಿರುವ ಪ್ರತಿಯೊಬ್ಬ ರೋಗಿಯಲ್ಲೂ ಈ ಚಿಹ್ನೆಗಳು ಕಾಣಿಸಿಕೊಳ್ಳುವುದೇ ಎಂದು ರೋಗಿಯ ಕಡೆಯವರೂ, ವೈದ್ಯರೂ ನಿಗಾ ಇಟ್ಟಿರಬೇಕಾಗುತ್ತದೆ.

ಮೆದುಳಿಗೆ ಏಟು ಬಿದ್ದಿರುವುದನ್ನು ಸಿ.ಟಿ.ಸ್ಕ್ಯಾನ್ ಹಾಗೂ ಎಮ್.ಆರ್.ಐ.ಸ್ಕ್ಯಾನ್‌ಗಳೆಂಬ ಎರಡು ಪರೀಕ್ಷೆಗಳಿಂದ ನಿಖರವಾಗಿ ಗುರುತಿಸಬಹುದು. ಅಲ್ಲದೆ ಯಾವ ತರಹದ ಏಟು ಬಿದ್ದಿದೆ, ಎಷ್ಟು ಏಟು ಬಿದ್ದಿದೆ, ಯಾವ ರೀತಿ ಚಿಕಿತ್ಸೆ ನಡೆಸಬೇಕು. ಚಿಕಿತ್ಸೆಯ ಪರಿಣಾಮ ಹೇಗಿದೆ ಎಂಬುದನ್ನೆಲ್ಲಾ ಈ ಸ್ಕ್ಯಾನ್‌ಗಳ ಮುಖಾಂತರ ತಿಳಿಯಬಹುದು. ಮಿದುಳಿಗೆ ಏಟುಬಿದ್ದ ರೋಗಿಯ ಚಿಕಿತ್ಸೆಯನ್ನು ನ್ಯೂರೋ ಸರ್ಜನ್ ಎಂಬ ತಜ್ಞರು ಮಾಡುತ್ತಾರೆ. ತೀವ್ರ ತೆರನಾದ ಏಟುಬಿದ್ದ ಕೆಲವು ರೋಗಿಗಳಲ್ಲಿ ಶಸ್ತ್ರಚಿಕಿತ್ಸೆ ನಡೆಸಬೇಕಾದ ಸಂದರ್ಭವೂ ಬರಬಹುದು.

ಕೊನೆಗೊಂದು ಎಚ್ಚರಿಕೆಯ ಮಾತು ಹಾಗೂ ಸಲಹೆ. ಅಂಕಿ-ಅಂಶಗಳನ್ನು ಅವಲೋಕಿಸಿದಾಗ ಮೆದುಳಿಗೆ ಬಿದ್ದ ಏಟು ಮಾರಣಾಂತಿಕವಾಗಿ ಪರಿಣಮಿಸಿದ ಸಂದರ್ಭಗಳೇ ಜಾಸ್ತಿ. ಅಷ್ಟೇ ಅಲ್ಲದೇ, ಪ್ರಾಣ ಉಳಿದರೂ ಈ ಏಟಿನ ದುಷ್ಪರಿಣಾಮಗಳು ಅಸಹನೀಯವಾಗಿದ್ದು ತುಂಬಾ ಸಮಯ ಅನುಭವಿಸಬೇಕಾಗಬಹುದು ಅಥವಾ ಅದು ಸರಿಯಾಗದೇ ಇರಬಹುದು. ಹಾಗಾಗಿ ವಾಹನ ಚಲಾಯಿಸುವಾಗ, ಅಪಾಯಕಾರಿ ಕೆಲಸದಲ್ಲಿ ತೊಡಗಿರುವಾಗ ಶಿರಸ್ತ್ರಾಣ (Helmet) ಧರಿಸುವ ಕ್ರಮ, ಅಪಘಾತಕ್ಕೆ ಒಳಗಾದ ಸಂದರ್ಭದಲ್ಲಿ ನಮ್ಮ ಮೆದುಳನ್ನು ರಕ್ಷಿಸುವಲ್ಲಿ ವಹಿಸುವ ಮಹತ್ತರವಾದ ಪಾತ್ರ ಅಲ್ಲಗಳೆಯಲಾಗದ್ದು. ಆದುದರಿಂದ ಹೆಲ್ಮೆಟ್ ಧರಿಸಿಕೊಳ್ಳಿ. ನಿಮ್ಮ ತಲೆ ಉಳಿಸಿಕೊಳ್ಳಿ.

ಆರೋಗ್ಯ ಮಾಹಿತಿಯ ಬಗ್ಗೆ ಪ್ರಶ್ನೆಗಳನ್ನು ಎಸ್.ಎಮ್.ಎಸ್.ಮೂಲಕವೂ ತಿಳಿಸಬಹುದು. ಸಂಚಾರಿ ದೂರವಾಣಿ ನಂ. : 98451 36322

## ಅನಂತಪುರ ಈಶ್ವರಯ್ಯ ಅಭಿನಂದನ ಸಮಾರಂಭ

**ಭಾನುವಾರ ದಶಂಬರ 5 2010, ಭವಾನಿ ಮಂಟಪ, ಅಂಬಲಪಾಡಿ ದೇವಾಲಯ ಆವರಣ, ಉಡುಪಿ**

ಪೂರ್ವಾಹ್ನ ಗಂಟೆ 9-00 **ಛಾಯಾಚಿತ್ರ-ಚಿತ್ರಕಲಾ ಪ್ರದರ್ಶನ**

ಉದ್ಘಾಟಕರು : **ಶ್ರೀ ಪಿ. ರಬೀಂದ್ರ ನಾಯಕ್** ನಾಲ್ಕು ಮಾತು : **ಶ್ರೀ ರಮೇಶ್ ರಾವ್**

ಗಂಟೆ 10-00 **ಉದ್ಘಾಟನೆ**

ಅಧ್ಯಕ್ಷತೆ : **ಶ್ರೀ ಪಿ. ರಬೀಂದ್ರ ನಾಯಕ್** ಉದ್ಘಾಟಕರು : **ಡಾ। ವಿದುಷಿ ಟಿ. ಎಸ್. ಸತ್ಯವತಿ**

ದಿಕ್ಸೂಚಿ ಭಾಷಣ : **ಡಾ। ಮಹಾಬಲೇಶ್ವರ ರಾವ್**

ಗಂಟೆ 11-00 **ವಿಚಾರಗೋಷ್ಠಿ ಚಿತ್ರ-ಛಾಯಾಚಿತ್ರ, ಮಾಧ್ಯಮ-ಸಾಹಿತ್ಯ-ಸಂಗೀತರಂಗ**

ಚಿತ್ರ-ಛಾಯಾಚಿತ್ರ : **ಡಾ। ಎನ್.ಎ.ಮಧ್ಯಸ್ಥ**

ಸಂಗೀತ, ನೃತ್ಯ, ಯಕ್ಷಗಾನ : **ಶ್ರೀಮತಿ ಪ್ರತಿಭಾ ಸಾಮಗ**

ಪತ್ರಿಕಾ ಮಾಧ್ಯಮ : **ಶ್ರೀ ಮನೋಹರ ಪ್ರಸಾದ್** ಅಧ್ಯಕ್ಷತೆ : **ಪ್ರೊ। ಮುರಲೀಧರ ಉಪಾಧ್ಯ**

- ಭೋಜನ ವಿರಾಮ -

ಅಪರಾಹ್ನ ಗಂಟೆ 2-00 **ಡಿಜಿಟಲ್ ಭಾವಚಿತ್ರ ಪಾತ್ಯಕ್ಷಿಕೆ**

**ಶ್ರೀ ಸಂತೋಷ್ ಪೈ, ಆರ್ಟಿಸ್ಟ್ ಫೋರಂ, ಉಡುಪಿ.**

ಗಂಟೆ 3-00 **ಡಿ.ವಿ.ಗುಂಡಪ್ಪರವರ "ಮಂಕುತಿಮ್ಮನ ಕಗ್ಗ" ಆಧಾರಿತ ಇಂದ್ರಜಾಲ ಪ್ರದರ್ಶನ**

**ಶ್ರೀ ಎಂ.ಡಿ.ಕೌಶಿಕ್, ಬೆಂಗಳೂರು**

ಗಂಟೆ 4-00 **ಅಭಿನಂದನ ಸಮಾರಂಭ**

ಅಧ್ಯಕ್ಷತೆ : **ವಿದ್ಯಾವಾಚಸ್ಪತಿ ಬನ್ನಂಜೆ ಗೋವಿಂದಾಚಾರ್ಯ**

ಶುಭಾಶಂಸನ : **ಡಾ। ಪಾದೆಕಲ್ಲು ವಿಷ್ಣು ಭಟ್** ಅಭಿನಂದನೆ : **ಡಾ। ಎಂ. ಪ್ರಭಾಕರ ಜೋಶಿ**

ವಿಶೇಷ ಅತಿಥಿಗಳು :

**ಡಾ। ನಿ.ಬೀ.ವಿಜಯಬಲ್ಲಾಳ, ಧರ್ಮದರ್ಶಿ, ಶ್ರೀ ಜನಾರ್ದನ ಮಹಾಕಾಳಿ ದೇವಸ್ಥಾನ, ಅಂಬಲಪಾಡಿ**

**ಶ್ರೀ ಕೆ. ರಘುಪತಿ ಭಟ್, ಶಾಸಕರು, ಉಡುಪಿ**

**ಶ್ರೀ ಪ್ರಮೋದ ಮಧ್ವರಾಜ್, ಉದ್ಯಮಿ, ಮಲ್ಪೆ**

ಗಂಟೆ 6-00 **ಸಂಗೀತ ಕಛೇರಿ**

**ಡಾ। ವಿದುಷಿ ಟಿ ಎಸ್ ಸತ್ಯವತಿ ಮತ್ತು ಬಳಗ, ಬೆಂಗಳೂರು**

*ತಮಗೆ ಆದರದ ಸ್ವಾಗತ*

## ವಧೂ-ವರರ ವೇದಿಕೆ

**ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಶಾರದಾನಗರ, ಕುಂಜಿಬೆಟ್ಟು, ಉಡುಪಿ.**

ಸಮಾಜದ ವಿವಾಹ ಯೋಗ್ಯ ವಧೂ-ವರರ ನೋಂದಣಿ, ವಿವಿಧ ಮಾಹಿತಿ ಮೊದಲಾದವುಗಳನ್ನು ಆಸಕ್ತ ಹೆತ್ತವರು ಪಡೆದುಕೊಂಡು ಪರಸ್ಪರ ವಿಚಾರ ವಿನಿಮಯ ಮಾಡಲು ಅವಕಾಶವಿದೆ. ಸಮಾಜ ಬಾಂಧವರು ವೇದಿಕೆಯ ಸದುಪಯೋಗ ಪಡೆದುಕೊಳ್ಳಬೇಕಾಗಿ ವಿನಂತಿ.

**- ಅಧ್ಯಕ್ಷರು, ವಧೂವರರ ವೇದಿಕೆ, ಶ್ರೀಶಾರದಾ ಮಂಟಪ, ಕುಂಜಿಬೆಟ್ಟು, ಉಡುಪಿ-2**

## ವೈದ್ಯಕೀಯ ನೆರವು ವೇದಿಕೆ

**ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಶಾರದಾ ನಗರ, ಕುಂಜಿಬೆಟ್ಟು , ಉಡುಪಿ**

ನೆರವಿನ ಅಗತ್ಯವುಳ್ಳ ನಮ್ಮ ಸಮಾಜ ಬಾಂಧವರು ಅರ್ಜಿ ಕಳುಹಿಸಬೇಕಾದ ವಿಳಾಸ : ಕಾರ್ಯದರ್ಶಿ, ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ, ಶ್ರೀಶಾರದಾ ಮಂಟಪ, ಕುಂಜಿಬೆಟ್ಟು, ಉಡುಪಿ-576102. ನವಂಬರ್ ತಿಂಗಳಿನಲ್ಲಿ ನಮ್ಮ ಸಮಾಜದ ನಾಲ್ವರಿಗೆ ತಲಾ ರೂ.3,000/- ವೈದ್ಯಕೀಯ ಸಹಾಯವನ್ನು ನೀಡಲಾಗಿದೆ.

ವೈದ್ಯಕೀಯ ನೆರವು ವೇದಿಕೆಯ ಮಹದುದ್ದೇಶದ ಯೋಜನೆಯನ್ನು ಯಶಸ್ವಿಯಾಗಿಯೂ, ನಿರಂತರವಾಗಿಯೂ ನಡೆಸುವಂತಾಗಲು ಸಮಾಜ ಬಾಂಧವರು ದೇಣಿಗೆಗಳನ್ನು "ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ, ಕುಂಜಿಬೆಟ್ಟು ಉಳಿತಾಯ ಖಾತೆ ನಂ.220/2928 ಸಿಂಡಿಕೇಟ್ ಬ್ಯಾಂಕ್, ರಥಬೀದಿ ಬ್ರಾಂಚ್" ಈ ಹೆಸರಿನಲ್ಲಿ ಚೆಕ್ ಅಥವಾ ಡಿ.ಡಿ. ರೂಪದಲ್ಲಿ ಕಾರ್ಯದರ್ಶಿ, ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ, ಶ್ರೀಶಾರದಾ ಮಂಟಪ, ಕುಂಜಿಬೆಟ್ಟು, ಉಡುಪಿ-576 102 : ಈ ವಿಳಾಸಕ್ಕೆ ಕಳುಹಿಸಬೇಕಾಗಿ ವಿನಂತಿ.

**- ಅಧ್ಯಕ್ಷರು ಮತ್ತು ಸಂಚಾಲಕರು, ವೈದ್ಯಕೀಯ ನೆರವು ವೇದಿಕೆ**


**Buying and selling shares as easy as checking your emails**

**Sharekhan Online Trading Account Features:**

- Your bank account gets directly linked to trading account
- Can do direct fund transfer from any of 11 leading banks
- Choose your trading account, Classic, FastTrade, TradeTiger
- Apply online for Stocks, Mutual Funds and IPO's

**Contact : Pradeep Rao K.**
**Tel : 0824 2412903, 9448191028**
**Navadurga Share Services**
**Email : navdurga@bp.sharekhan.com**

Sharekhan
YOUR GUIDE TO THE FINANCIAL JUNGLE

Visit : www.sharekhan.com

Sharekhan Ltd.: BSE Cash-INB011073351; F&O-INF011073351; CD-INE011073351; NSE - INB/ INF231073330; CD - INE231073330; MCX Stock Exchange : CD - INE261073330 DP: NSDL-IN-DP-NSDL-233-2003; CDSL -IN-DP-CDSL- 271-2004; PMS INP000000662; Mutual Fund: ARN 20669. Sharekhan Commodities Pvt.Ltd.: MCX- 10080(MCX/TCL/CORP/0425); NCDEX -00132; (NCDEX/TCM/CORP/0142); for any complaints email at igc@sharekhan.com. Regd Add:- A-206, Phoenix House, Phoenix Mills Compound, Senapati Bapat Marg, Lower Parel, Mumbai- 400013.Investing in equities & commodities future involves risk. Please carefully read the risk disclosure document as prescribed by SEBI & relevant exchanges and Do 's & Don'ts by NCDEX. (Subbroker Regn.Nos: BSE: INS010606122;NSE: INS23106924)


## ಶ್ರೀಶಾರದಾ ದೇವಸ್ಥಾನ, ಶಾರದಾನಗರ, ಕುಂಜಿಬೆಟ್ಟು , ಉಡುಪಿ

**ಈ ತಿಂಗಳ ಕಾರ್ಯಕ್ರಮಗಳು**

**(ದರ್ಶನದ ಸಮಯ ಬೆಳಿಗ್ಗೆ 8-00ರಿಂದ 12-00, ಸಂಜೆ 3-30ರಿಂದ 8-00)**

ಮಂಗಳಾರತಿ : ಪ್ರತಿ ದಿನ ಬೆಳಿಗ್ಗೆ 8-00, ಮಧ್ಯಾಹ್ನ 12-00 ಹಾಗೂ ರಾತ್ರಿ 7-30 ಗಂಟೆಗೆ

ಪ್ರತಿ ಬುಧವಾರ : **"ಸೌಂದರ್ಯಲಹರಿ ಪಾರಾಯಣ"** ಸಂಜೆ 5-00 ಗಂಟೆಯಿಂದ (ಮಹಿಳಾ ವಿಭಾಗದಿಂದ)

ಪ್ರತಿ ಶುಕ್ರವಾರ : **ಲಲಿತಾ ಸಹಸ್ರನಾಮ ಮತ್ತು ದೇವರ ಭಜನೆ** ಸಂಜೆ 5-00 ಗಂಟೆಯಿಂದ (ಮಹಿಳಾ ವಿಭಾಗದಿಂದ)

ಪ್ರತಿ ಆದಿತ್ಯವಾರ : ಸ್ವಾಧ್ಯಾಯ ಸಮಿತಿಯವರಿಂದ **"ಪಾರಾಯಣ"** ಸಂಜೆ ಗಂಟೆ 4-30ರಿಂದ

**ಸಂಕಷ್ಟಹರ ಚತುರ್ಥಿಯಂದು (ತಾ.25-11-2010) "ಸಾಮೂಹಿಕ ಗಣಹೋಮ" ಬೆಳಿಗ್ಗೆ ಗಂಟೆ 10-00ರಿಂದ (ಸೇವಾ ಶುಲ್ಕ ರೂ.51/-)**

2ನೇ ಶನಿವಾರ : **ತಾ.11-12-2010 "ಗಮಕವಾಚನ" ಸಂಜೆ ಗಂಟೆ 5-00ರಿಂದ (ಶ್ರೀ ನೀಲಾವರ ಲಕ್ಷ್ಮೀನಾರಾಯಣ ರಾವ್ ಹಾಗೂ ಶ್ರೀ ಬಾರ್ಕೂರು ನಾಗೇಶ ರಾವ್‌ರವರಿಂದ)**

**ತಾ.19-12-2010 'ಸಾಮೂಹಿಕ ಶ್ರೀಚಂಡಿಕಾಯಾಗ ಮತ್ತು ಶ್ರೀಶಾರದಾ ಪೂಜೆ'**

**ಶುದ್ಧ ಮಾರ್ಗಶಿರ ಪಂಚಮಿಯಂದು (ತಾ.10-12-2010) "ನಾಗದೇವರಿಗೆ ತನುಸೇವೆ" ಬೆಳಿಗ್ಗೆ 9-00ರಿಂದ ಮಧ್ಯಾಹ್ನ 12-00 ಗಂಟೆಯ ತನಕ**

**ಭಕ್ತಾದಿಗಳೆಲ್ಲರಿಗೂ ಆದರದ ಸ್ವಾಗತ**





**RAJESH POWER PRESS**

PRINTERS & PUBLISHERS
DARBE, PUTTUR, DA. KA. -574 202.
KARNATAKA STATE, SOUTH INDIA.
Ph :(08251) 231696, 231697 & 322386
E-mail :msraghunathrao@hotmail.com

**QUALITY FIRST AND ALWAYS**

*ನಮ್ಮಲ್ಲಿ ಹೋಮ, ಹವನ ಇತ್ಯಾದಿ ಕಾರ್ಯಕ್ರಮಗಳನ್ನು ಅಚ್ಚುಕಟ್ಟಾಗಿ ನಡೆಸಿಕೊಡಲಾಗುವುದು ಹಾಗೂ (ಹೊರಗಿನ) ಮದುವೆ, ಉಪನಯನ ಇತ್ಯಾದಿ ವಿಶೇಷ ಸಮಾರಂಭಗಳಿಗೆ ಕ್ಯಾಟರಿಂಗ್ ವ್ಯವಸ್ಥೆಯನ್ನು ಮಾಡಲಾಗುವುದು.*

**ಸಂಪರ್ಕಿಸಿರಿ :**

**ಕೆ. ರಾಮಮೂರ್ತಿ ಭಟ್,** ಪುರೋಹಿತರು

**ಶಾರದಾ ಕೃಪಾ, ಆತ್ರಾಡಿ, ಉಡುಪಿ ತಾಲೂಕು. ಮೊಬೈಲ್ : 9448108010**

**ಎಮ್. ದೇವಾನಂದ್ ಭಟ್** Cell :9845644556

**ಶೋಭಾ ಡಿಜಿಟಲ್**
ಸ್ಟುಡಿಯೋ & ವೀಡಿಯೋ

ಉತ್ತಮ ಗುಣಮಟ್ಟದ ಫೋಟೋಗ್ರಾಫಿಗಾಗಿ ಸಂಪರ್ಕಿಸಿರಿ



**ಬೆಳ್ವಾಯಿ-574213**
(08258)-276177 (O), (918258)-324133 (O), 276777 (R)
ಎಡಪದವು - **574 164** (0824)-256374 (O) ಮಂಗಳೂರು, ದ.ಕ.

**PRAMOD**
AUTOMOBILES
KARANGALPADY, MANGALORE -575 003.

Ph : 2491723 (O)
2493633 (H.O.)
2212723 (R)

: Wholesale & Retail Dealers in :
2 & 3 WHEELERS SPARES & ACCESSORIES

Prop. :Ln.K. HARSHA KUMAR

**ರಾಮಾ ಅಟೋಮೊಬೈಲ್ಸ್**

ಮಾರುತಿ ವಾಹನ ತಜ್ಞರು

ಮಲೆಮಾರ್ ರಸ್ತೆ, ಕೊಟ್ಟಾರ ಚೌಕಿ, ಮಂಗಳೂರು - 575 006.

**ಫೋನ್ : 2454355, ಮೊಬೈಲ್ : 94485 45702**



ಪ್ರೊ : ಯು. ಸಂತೋಷ ಕುಮಾರ್, ಉಜ್ಜೋಡಿ




Owned & Published by : B. Krishnamoorthy Rao, Ambalpady - Secretary Sthanika Dravida Brahmana Sangha (R.), Shri Sharada Mantapa, Kunjibettu, Udupi - 576 102. Ph : 0820-2520754
Edited by Y. Mohan Rao, Designed @ SriNidhi Computer Graphics, Bailur, Udupi, Printed at Agrahara Offsets, Udupi - 576 101. E-mail : srisharadaudupi@yahoo.co.in Website : www.srisharada.org